ಕರ್ನಾಟಕ ವಿಧಾನ ಸಭೆ

ಗುರುವಾರ 25ನೇ ಅಕ್ಟೋಬರ್ 1990 ಕಾರ್ತಿಕ 3, 1912 ಶಕ
ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ
ಬೆಳಿಗ್ಗೆ 11.00 ಗಂಟೆಗೆ ಸಮಾವೇಶಗೊಂಡಿತು.

[ಅಧ್ಯಕ್ಷರು: (ಶ್ರೀ ಎಸ್.ಎಂ. ಕೃಷ್ಣ) ಅವರು ಪೀಠವನ್ನು ಅಲಂಕರಿಸಿದ್ದರು..]

-:೦:-

ಸಂತಾಪ ಸೂಚನೆಗಳು

ಅಧ್ಯಕ್ಷರು:- ಶ್ರೀಯುತರುಗಳಾದ ಕಮಲಾಪತಿ ತ್ರಿಪಾಠಿ, ಬಿ.ಎಂ.ಪಾಟೀಲ್, ಜಿ.ಪಾಪಣ್ಣ, ಸಿ.ಎಂ.ಪೂಣಚ್ಚ, ಜೆ.ಎಸ್.ದೇಶ್‌ಮುಖ್, ಎಸ್.ಎಸ್.ಕಡಪಟ್ಟಿ, ಟಿ.ಆರ್‌ಶಾಮಣ್ಣ, ಎಸ್.ಎಂ. ಲಿಂಗಪ್ಪ, ಹೆಚ್.ಬಿ.ಕೆಂಚೇಗೌಡ, ಡಾ:ಬಿ.ಎಂ.ತಿಪ್ಪೇಸ್ವಾಮಿ ಹಾಗೂ ಬಿ.ಎಲ್.ನಾರಾಯಣಸ್ವಾಮಿ ಅವರುಗಳು ನಿಧನರಾದುದನ್ನು ಈ ಸದನಕ್ಕೆ ತಿಳಿಸಲು ವಿಷಾದಿಸುತ್ತೇನೆ.

1. ಉತ್ತರ ಪ್ರದೇಶದ ಮಾಜಿ ಮುಖ್ಯಮಂತ್ರಿ ಹಾಗೂ ಕೇಂದ್ರ ಸರ್ಕಾರದ ಮಾಜಿ ಸಚಿವರಾಗಿದ್ದ ಹಿರಿಯ ರಾಜಕಾರಣಿ ಹಾಗೂ ಸ್ವಾತಂತ್ರ್ಯ ಹೋರಾಟಗಾರರಾಗಿದ್ದ ಶ್ರೀ ಕಮಲಾಪತಿ ತ್ರಿಪಾಠಿಯವರು ದಿನಾಂಕ: 8-10-1990ರಂದು ನಿಧನರಾದರು.

ಶ್ರೀಯುತರು 1952ರಲ್ಲಿ ಉತ್ತರ ಪ್ರದೇಶದ ವಿಧಾನಸಭಾ ಸದಸ್ಯರಾಗಿ ಹಾಗೂ 1971ರಿಂದ 73ರವರೆಗೆ ಮುಖ್ಯಮಂತ್ರಿಯಾಗಿ ಸೇವೆ ಸಲ್ಲಿಸಿರುತ್ತಾರೆ. ನಂತರ ಶ್ರೀಯುತರು ರಾಜ್ಯಸಭಾ ಸದಸ್ಯರಾಗಿ ಆಯ್ಕೆಯಾಗಿ, ಕೇಂದ್ರ ಸಂಪುಟದಲ್ಲಿ ಸಚಿವರಾಗಿ ಸೇವೆಯನ್ನು ಸಲ್ಲಿಸಿರುತ್ತಾರೆ.

2. ಪ್ರಸ್ತುತ ವಿಧಾನ ಸಭಾ ಸದಸ್ಯರು ಹಾಗೂ ಮಾಜಿ ರಾಜ್ಯ ಮಂತ್ರಿಗಳು ಆದ ಶ್ರೀ ಬಿ.ಎಂ. ಪಾಟೀಲ್ ಅವರು ದಿನಾಂಕ: 27-7-1990ರಂದು ನಿಧನರಾದರು.

ಶ್ರೀಯುತರು 1962ರಿಂದ 67ರ ಮೂರನೆ ವಿಧಾನಸಭೆ, 1967ರಿಂದ 71ರ ನಾಲ್ಕನೆ ವಿಧಾನ ಸಭೆ 1985ರಿಂದ 89ರ ಎಂಟನೆ ವಿಧಾನ ಸಭೆ ಹಾಗೂ 1989ರಿಂದ 90ರ ಒಂಭತ್ತನೆ ವಿಧಾನ ಸಭೆಯ ಸದಸ್ಯರಾಗಿ ಹಾಗೂ 1976ರಿಂದ 82ರ ವರೆಗೆ ವಿಧಾನ ಪರಿಷತ್ತಿನ ಸದಸ್ಯರಾಗಿ, ಹಾಗೂ 1968ರಿಂದ 71ರ ನಾಲ್ಕನೆ ವಿಧಾನ ಸಭೆಯಲ್ಲಿ ಪುರಸಭಾಡಳಿತ ರಾಜ್ಯ ಸಚಿವರಾಗಿ ಸೇವ ಸಲ್ಲಿಸಿರುತ್ತಾರೆ ಹಾಗೂ ಶ್ರೀಯುತರು ಸಮಾಜ ಶಿಕ್ಷಣ ಹಾಗೂ ಸಹಕಾರ ಕ್ಷೇತ್ರಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಸೇವೆಯನ್ನು ಸಲ್ಲಿಸಿರುತ್ತಾರೆ.

3. ವಿಧಾನ ಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಜಿ. ಪಾಪಣ್ಣರವರು ದಿನಾಂಕ 29-7-1990ರಂದು ನಿಧನರಾದರು.

ಶ್ರೀಯುತರು 1952ರಿಂದ 57ರವರೆಗಿನ ಮೊದಲನೇ ವಿಧಾನಸಭಾ ಸದಸ್ಯರಾಗಿ ಸೇವೆಯನ್ನು ಸಲ್ಲಿಸಿರುತ್ತಾರೆ. ಶ್ರೀಯುತರು ಸ್ವಾತಂತ್ರ್ಯ ಹೋರಾಟಗಾರರಾಗಿದ್ದು, 1972ನೇ ಇಸವಿಯ ಭೂದಾನ ಚಳುವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದ ಕೀರ್ತಿ ಇವರದಾಗಿರುತ್ತದೆ.

4. ಸ್ವಾತಂತ್ರ್ಯ ಹೋರಾಟಗಾರರು, ಮಾಜಿ ಸಚಿವ ಹಾಗೂ ವಿಧಾನಸಭಾ ಸದಸ್ಯರಾಗಿದ್ದ ಶ್ರೀ ಸಿ.ಎಂ. ಪೂಣಚ್ಚ ಅವರು ದಿನಾಂಕ 3ನೇ ಆಗಸ್ಟ್ 1990ರಂದು ನಿಧನರಾದರು.

ಶ್ರೀಯುತರು 1956ರಿಂದ 57ರ ಮೊದಲನೆ ವಿಧಾನಸಭೆ ಹಾಗೂ 1957ರಿಂದ 62ರ ಎರಡನೇ ವಿಧಾನಸಭಾ ಸದಸ್ಯರಾಗಿ ಸೇವೆ ಸಲ್ಲಿಸಿರುತ್ತಾರೆ. ಶ್ರೀಯುತರು ಲೋಕಸಭಾ ಸದಸ್ಯರಾಗಿ ಹಾಗೂ ಕೇಂದ್ರ ರೈಲ್ವೆ ಮತ್ತು ಪೆಟ್ರೋಲಿಯಂ ಖಾತೆ ಸಚಿವರಾಗಿಯೂ, ಮಧ್ಯಪ್ರದೇಶ ಮತ್ತು ಒರಿಸ್ಸಾ ರಾಜ್ಯಗಳ ರಾಜ್ಯಪಾಲರಾಗಿಯೂ ಸಹ ಸೇವೆ ಸಲ್ಲಿಸಿರುತ್ತಾರೆ.

5.ಮಾಜಿ ವಿಧಾನ ಸಭಾ ಸದಸ್ಯರು ಹಾಗೂ ಮಂತ್ರಿಗಳಾಗಿದ್ದ ಶ್ರೀ ಜೆ.ಎಸ್. ದೇಶ್‌ಮುಖ್‌ರವರು ದಿನಾಂಕ 5-8-1990ರಂದು ನಿಧನರಾದರು.

ಶ್ರೀಯುತರು 1978ರಿಂದ 83ರ ಆರನೇ ವಿಧಾನ ಸಭೆ, 1983ರಿಂದ 84ರ ಏಳನೇ ವಿಧಾನ ಸಭೆ ಹಾಗೂ 1985ರಿಂದ 1989ರ ಎಂಟನೆ ವಿಧಾನ ಸಭಾ ಸದಸ್ಯರಾಗಿದ್ದು ಹಾಗೂ ಇಂಧನ, ಗಣಿ ಮತ್ತು ಭೂ ವಿಜ್ಞಾನ ಮಂತ್ರಿಗಳಾಗಿಯೂ ಸೇವೆ ಸಲ್ಲಿಸಿರುತ್ತಾರೆ. ಶ್ರೀಯುತರು ಶಿಕ್ಷಣ ಕ್ಷೇತ್ರಗಳಲ್ಲಿಯೂ ಸಹ ಗಣನೀಯ ಸೇವೆ ಸಲ್ಲಿಸಿರುತ್ತಾರೆ.

6. ವಿಧಾನ ಸಭೆಯ ಮಾಜಿ ಸದಸ್ಯರಾಗಿದ್ದಂತಹ ಶ್ರೀ ಎಸ್.ಎಸ್. ಕಡಪಟ್ಟಿ ಆವರು ದಿನಾಂಕ 10-8-1990ರಂದು ನಿಧನರಾದರು.

ಶ್ರೀಯುತರು 1983ರಿಂದ 84ರ ಏಳನೇ ವಿಧಾನ ಸಭಾ ಹಾಗೂ 1985ರಿಂದ 89ರ ಎಂಟನೆ ವಿಧಾನ ಸಭಾ ಸದಸ್ಯರಾಗಿ ಸೇವೆ ಸಲ್ಲಿಸಿರುತ್ತಾರೆ. ಶ್ರೀಯುತರು ನೇಮಕಾತಿಗಳಲ್ಲಿ ಪ್ರಾದೇಶಿಕ ಅಸಮಾನತೆ ಬಗ್ಗೆ ಅಧ್ಯಯನ ಮಾಡಲು ರಚಿಸಿದ ಸದನದ ಸಮಿತಿಯ ಅಧ್ಯಕ್ಷರಾಗಿ ಹಾಗೂ ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿರುತ್ತಾರೆ.

7. ವಿಧಾನ ಸಭೆ, ವಿಧಾನ ಪರಿಷತ್ತು ಹಾಗೂ ಸಂಸತ್ತಿನ ಮಾಜಿ ಸದಸ್ಯರಾಗಿದ್ದಂತಹ ಶ್ರೀ ಟಿ.ಆರ್. ಶಾಮಣ್ಣ ಆವರು ದಿನಾಂಕ 30-8-1990ರಂದು ನಿಧನರಾದರು.

ಶ್ರೀಯುತರು 1967ರಿಂದ 71ರ ನಾಲ್ಕನೆ ವಿಧಾನ ಸಭೆ, 1972ರಿಂದ 77ರ ಐದನೆ ವಿಧಾನ ಸಭೆ, 1978ರಿಂದ 80ರ ಆರನೇ ವಿಧಾನ ಸಭಾ ಸದಸ್ಯರಾಗಿ, 1980ರಿಂದ 85ನೇ ಸಾಲುಗಳಲ್ಲಿ ಸಂಸತ್ ಸದಸ್ಯರಾಗಿ ಹಾಗೂ 1985ರಿಂದ 1988ನೇ ಸಾಲುಗಳಲ್ಲಿ ವಿಧಾನ ಪರಿಷತ್ತಿನ ಸದಸ್ಯರಾಗಿ ಗಣನೀಯ ಸೇವೆ ಸಲ್ಲಿಸಿರುತ್ತಾರೆ. ಶ್ರೀಯುತರು ರಾಜ್ಯ ಬೆರಳಚ್ಚು ಸಂಸ್ಥೆಗಳ ಕಾರ್ಯ ನಿರ್ವಹಣೆಯಲ್ಲಿ ಹಾಗೂ ಸಮಾಜದ ಶಿಕ್ಷಣ ಹಾಗೂ ಧಾರ್ಮಿಕ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿರುತ್ತಾರೆ.

8. ವಿಧಾನ ಸಭೆಯ ಮಾಜಿ ಸದಸ್ಯರಾಗಿದ್ದಂತಹ ಶ್ರೀ ಎಸ್.ಎಂ. ಲಿಂಗಪ್ಪನವರು ದಿನಾಂಕ 10-8-1990ರಂದು ನಿಧನರಾದರು.

ಶ್ರೀಯುತರು 1952ರಿಂದ 57ರ ಮೊದಲನೆ ವಿಧಾನ ಸಭೆ, 1972ರಿಂದ 77ರ ಐದನೇ ವಿಧಾನ ಸಭೆ ಹಾಗೂ 1978ರಿಂದ 83ರ ಆರನೇ ವಿಧಾನ ಸಭಾ ಸದಸ್ಯರಾಗಿ ಸೇವೆ ಸಲ್ಲಿಸಿರುತ್ತಾರೆ. ಹಾಗೂ ಶ್ರೀಯುತರು ಬಡವರ ಏಳಿಗೆಗಾಗಿ ಸಾಕಷ್ಟು ಸೇವೆ ಸಲ್ಲಿಸಿರುತ್ತಾರೆ.

9. ವಿಧಾನ ಸಭೆಯ ಮಾಜಿ ಸದಸ್ಯರಾಗಿದ್ದಂತಹ ಶ್ರೀ ಹೆಚ್.ಬಿ. ಕೆಂಚೇಗೌಡ, ಆವರು ದಿನಾಂಕ 5-9-1990ರಂದು ನಿಧನರಾದರು.

ಶ್ರೀಯುತರು 1972ರಿಂದ 77ರವರೆಗಿನ ಐದನೆ ವಿಧಾನ ಸಭಾ ಸದಸ್ಯರಾಗಿ ಸೇವೆ ಸಲ್ಲಿಸಿರುತ್ತಾರೆ.

10. ವಿಧಾನ ಸಭೆಯ ಮಾಜಿ ಸದಸ್ಯರು ಹಾಗೂ ರಾಜ್ಯ ಜನತಾ ಪಕ್ಷದ ಅಧ್ಯಕ್ಷರೂ ಆದ ಎಂ.ಪಿ.ಎಂ. ತಿಪ್ಪೇಸ್ವಾಮಿ ಆವರು ದಿನಾಂಕ 16-10-1990ರಂದು ನಿಧನರಾದರು.

ಶ್ರೀಯುತರು 1983ರಿಂದ 85ರ ಏಳನೇ ವಿಧಾನ ಸಭೆ ಹಾಗೂ 1985ರಿಂದ 89ರ ಎಂಟನೇ ವಿಧಾನ ಸಭಾ ಸದಸ್ಯರಾಗಿ ಸೇವೆ ಸಲ್ಲಿಸಿರುತ್ತಾರೆ. ಶ್ರೀಯುತರು ವೈದ್ಯಕೀಯ ಕ್ಷೇತ್ರ ಹಾಗೂ ಶಿಕ್ಷಣ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿರುವುದರ ಜೊತೆಗೆ ಸಮಾಜದ ದಿನ ದಲಿತರ ಏಳಿಗೆಗಾಗಿ ವಿರತವಾಗಿ ಶ್ರಮಿಸಿರುತ್ತಾರೆ.

11. ವಿಧಾನ ಸಭೆಯ ಮಾಜಿ ಸದಸ್ಯರಾಗಿದ್ದಂತಹ ಶ್ರಿ ಬಿ.ಎಲ್. ನಾರಾಯಣಸ್ವಾಮಿಯವರು ದಿನಾಂಕ 16-10-1990ರಂದು ನಿಧನರಾದರು.

ಶ್ರೀಯುತರು 1945ರಿಂದ 49ರವರೆಗೆ ಪ್ರಜಾಪ್ರತಿನಿಧಿ ಸಭೆಯಲ್ಲಿ, 1957ರಿಂದ 62ರ ಎರಡನೆ ವಿಧಾನ ಸಭೆ ಹಾಗೂ 1967ರಿಂದ 71ರ ನಾಲ್ಕನೆ ವಿಧಾನ ಸಭಾ ಸದಸ್ಯರಾಗಿ ಸೇವೆ

ಸಲ್ಲಿಸಿರುತ್ತಾರೆ. ಶ್ರೀಯುತರು ಸ್ವಾತಂತ್ಯ ಹೋರಾಟಗಾರರಾಗಿ, ಶಿಕ್ಷಣ, ಕೃಷಿ ಕ್ಷೇತ್ರಗಳಲ್ಲಿಯೂ ಸಹ ಗಣನೀಯ ಸೇವೆ ಸಲ್ಲಿಸಿರುತ್ತಾರೆ.

† ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು): ಮಾನ್ಯ ಸಭಾಧ್ಯಕ್ಷರೆ, ನಾವು ಈಗ ಅತ್ಯಂತ ದುಃಖದಾಯಕವಾದ ಸನ್ನಿವೇಶದಲ್ಲಿದ್ದೇವೆ. ಸಂತಾಪ ಸೂಚಕ ನಿರ್ಣಯವನ್ನು ಮಾಡತಕ್ಕ ಸಂದರ್ಭದಲ್ಲಿ ನಾವಿದ್ದೇವೆ. ನಾವೆಲ್ಲರೂ ಸಾರ್ವಜನಿಕ ಕ್ಷೇತ್ರದಲ್ಲಿ ದುಡಿಯತಕ್ಕವರು. ಹಲವಾರು ಪಕ್ಷಗಳು, ಸಂಘ ಸಂಸ್ಥೆಗಳು, ಮುಂತಾದ ಕಡೆ ವಿವಿಧ ಮುಖದ ಸೇವೆಯನ್ನು ಸಲ್ಲಿಸತಕ್ಕ ಸಂದರ್ಭದಲ್ಲಿದ್ದಾಗ ಶಕ್ತಿ ಮೀರಿ ಒಬ್ಬ ವ್ಯಕ್ತಿ ಅಥವಾ ವ್ಯಕ್ತಿಗಳು ಸಾರ್ವಜನಿಕ ಹಿತದೃಷ್ಟಿಯಿಂದ, ದೇಶದ, ಸಮಾಜದ, ರಾಷ್ಟ್ರದ ಹಿತದೃಷ್ಟಿಯಿಂದ ಸೇವೆಯನ್ನು ಸಲ್ಲಿಸತಕ್ಕ ಸಂದರ್ಭ ಒದಗಿಬರುತ್ತದೆ. ಕೆಲವೊಮ್ಮೆ ಅಕಾಲಿಕ ಮರಣ ಅವರ ಬಹುಮುಖ ಸೇವೆಯನ್ನು ಅವರಿಂದ ಕಿತ್ತುಕೊಳ್ಳುತ್ತದೆ. ನಾವು ಇನ್ನೂ ಸಮಾಜಕ್ಕೆ ದೇಶಕ್ಕೆ ಸೇವೆಯನ್ನು ಸಲ್ಲಿಸಬೇಕೆಂಬ ಆಸಿಸಿಕೆ ಇದ್ದಾಗ ವಿಧಿ ತನ್ನ ಕಡೆ ಸೆಳೆದಾಗ ಸಹಜವಾಗಿ ನಾವು ದುಃಖಭರಿತರಾಗುತ್ತೇವೆ. ಅಂಥವರ ಅಗಲಿಕೆಯಿಂದ ನಾವೆಲ್ಲ ದಿಙ್ಮೂಢರಾಗುತ್ತೇವೆ. ಅಂಥವರ ಸಾವಿನಿಂದ ನಾವು ಒಳ್ಳೆಯ ವ್ಯಕ್ತಿ ಮತ್ತು ಅವರ ಸೇವೆಯನ್ನು ಕಳೆದುಕೊಳ್ಳುತ್ತೇವೆ. ಆದರಲ್ಲೂ ಅವರವರ ಕುಟುಂಬದವರ ದುಃಖವಂತೂ ಅಸದಳ. ಆದು ಹೆಚ್ಚಾಗಿ ಅನಿವಾರ್ಯವಾಗುತ್ತದೆ. ಇಂಥ ಸಂದರ್ಭದಲ್ಲಿ ನಾವಿದ್ದೇವೆ. ರಾಷ್ಟ್ರ ಪುಟ್ಟದಲ್ಲಿರತಕ್ಕ ಅನೇಕ ಜನ ಮಹನೀಯರು ಕೂಡ ಕೆಲವೊಮ್ಮೆ ನಮ್ಮ ಗಮನವನ್ನು ಸೆಳೆದಿರುತ್ತಾರೆ. ಅಂತವರ ಪಟ್ಟಿಯಲ್ಲಿ ಇತ್ತೀಚೆಗೆ ಅಗಲಿ ಹೋಗಿರತಕ್ಕ ಶ್ರೀ ಕಮಲಾಪತಿ ತ್ರಿಪಾಠಿಯವರು ಒಬ್ಬರು. ಅವರು ಸ್ವಾತಂತ್ಯ ಹೋರಾಟದ ಧೀಮಂತ ವರ್ಗದಲ್ಲಿ ಅತ್ಯುನ್ನತ ಶ್ರೇಣಿಯಲ್ಲಿ ಇದ್ದವರು. ಅವರ ಸೇವೆಯನ್ನು ಪಕ್ಷ ಭೇದವಿಲ್ಲದೆ ಕೊಂಡಾಡತಕ್ಕದ್ದು, ಇವತ್ತು ಅವರು ಇರಬಹುದು, ನಾಳೆ ಮತ್ತೊಬ್ಬರು ಇರಬಹುದು ಆದು ನಮ್ಮ ಆದ್ಯ ಕರ್ತವ್ಯವಾಗಿರುತ್ತದೆ. ಅವರ ಸೇವೆ ಹುಟ್ಟಿನಿಂದ ಉತ್ತರ ಪ್ರದೇಶದಲ್ಲಿಯಾದರೂ ರಾಷ್ಟ್ರ ಮಟ್ಟದ ಸೇವೆ ಕೇಂದ್ರ ಸರ್ಕಾರಕ್ಕೆ ಬಂದಾಗ ನಡೆಯುತ್ತದೆ. ಒಬ್ಬ ವ್ಯಕ್ತಿ ರಾಜ್ಯಕ್ಕೆ ತನ್ನ ಸೇವೆಯನ್ನು ಸೀಮಿತಗೊಳಿಸಿದರೂ ಕೂಡ ಆ ರಾಜ್ಯ ಈ ರಾಷ್ಟ್ರದ ಅವಿಭಾಜ್ಯ ಅಂಗವಾಗಿರುವಾಗ ಆ ರಾಜ್ಯದ ಮೂಲಕ ರಾಷ್ಟ್ರಕ್ಕೆ ಸೇವೆ ಸಲ್ಲಿಸಿದಂತಾಗುತ್ತದೆ. ಈ ವಿಚಾರಧಾರೆಯಿಂದ ಅಂಥವರ ಬಹುಮುಖ ಸೇವೆಯನ್ನು ನಾವು ನೆನೆಸಿಕೊಳ್ಳತಕ್ಕ ಸಂದರ್ಭ ಇದು. ಅವರು ಒಬ್ಬ ಸ್ವಾತಂತ್ಯ ಹೋರಾಟಗಾರರಾಗಿ ಆ ಸಂದರ್ಭದಲ್ಲಿ ಎಂತಹ ಒಂದು ತ್ಯಾಗ ಭೂಮಿಕೆಯ ಆಧಾರದ ಮೇಲೆ ತನ್ನ ಕಾರ್ಯ ಕ್ಷೇತ್ರದಲ್ಲಿ ಎಂತಹ ಒಂದು ಹೋರಾಟವನ್ನು ಮಾಡಿದ್ದಾರೆ ಆದು ಈ ಪೀಳಿಗೆಗೆ ಅತ್ಯುತ್ತಮ ಮಾರ್ಗದರ್ಶನವಾಗಿದೆ ಎಂಬ ದೃಷ್ಟಿಯಿಂದ ಅಂಥ ಜೀವಿಗಳ ಅಗಲಿಕೆ ನಮಗೆ ತಾಪ ತಂದುಕೊಡುವ ಸಂದರ್ಭ ಇದಾಗಿದೆ. ಆದೇನೇ ಇರಲಿ, ಅವರ ಸೇವೆಯ ಬಗ್ಗೆ ಮಾನ್ಯ ಅಧ್ಯಕ್ಷರು ತಿಳಿಸಿದ್ದೀರಿ. ಪುನಃ ನಾನು ಆದನ್ನೇ ಉಚ್ಚಾರ ಮಾಡುವುದಕ್ಕೆ ಹೋಗುವುದಿಲ್ಲ. ದುಃಖ ಅವರ ಕುಟುಂಬಕ್ಕೆದೆ, ಆ ರಾಜ್ಯಕ್ಕಿದೆ, ಈ ರಾಷ್ಟ್ರಕ್ಕಿದೆ, ಈ ಸದನಕ್ಕೂ ಕೂಡ ಇದೆ. ಆದರೆ ನಾನು ಈ ಸಂದರ್ಭದಲ್ಲಿ ಆ ದುಃಖದಲ್ಲಿ ನಾವೂ ಪಾಲ್ಗೊಳ್ಳುತ್ತೇವೆ ಎನ್ನತಕ್ಕ ಮಾತನ್ನು ಕೂಡ ಹೇಳಿ, ಅವರ ಅಗಲಿಕೆ ಮಹಾ ನಷ್ಟ, ಈ ರಾಷ್ಟ್ರಕ್ಕೆ ರಾಜಕಾರಣಕ್ಕೆ ಎಂಬ ಮಾತನ್ನು ಹೇಳಿ ಅವರಿಗೆ ಈ ಸಂದರ್ಭದಲ್ಲಿ ಶ್ರದ್ಧಾಂಜಲಿಯನ್ನು ಅರ್ಪಣೆ ಮಾಡುತ್ತೇನೆ. ಮತ್ತೊಬ್ಬ ವ್ಯಕ್ತಿ ಮೊನ್ನೆಮೊನ್ನೆವರೆಗೂ ಇದ್ದರು. ಅವರು ಬಹಳ ಹಿತ ಮಿತ ಆಥವಾ ಮೃದುಭಾಷಿ. ನಾನು ನೋಡಿದ ಹಾಗೆ, ಬಿಜಾಪುರ ಜಿಲ್ಲೆಯ ಒಬ್ಬ ಪ್ರಮುಖ ರಾಜಕಾರಣಿಯಾಗಿದ್ದು ನಂತರ ರಾಜ್ಯಮಟ್ಟದ ಪ್ರಮುಖ ರಾಜಕಾರಣಿಯಾಗಿ ಮಾರ್ಪಾಡಾದರು. ಮಾಜಿ ಸಚಿವರಾಗಿದ್ದರು. ಶ್ರೀ ಬಿ.ಎಂ. ಪಾಟೀಲ್ ಅವರು ಬೇರೆಯವರ ಹಾಗೆ ಮಾತನಾಡುವ ಮಟ್ಟಕ್ಕೆ ಹೋಗುತ್ತಾ ಇರಲಿಲ್ಲ. ಅವರ ಜೊತೆ ಮಾತನಾಡುವ ಸಂದರ್ಭಗಳು ಬಹಳ ಖುಷಿಯಾದ ಸಂದರ್ಭಗಳು. ಎಷ್ಟೋ ಘಳಿಗೆಗಳು, ದಿನಗಳು, ವರ್ಷಗಳನ್ನು ಅವರ ಜೊತೆ ಕಳೆದಿದ್ದೇವೆ. ನಾವು ಇಲ್ಲಿ ಕುಳಿತಾಗ, ಅಲ್ಲಿ ಕುಳಿತಾಗ ನೋಡಿದ್ದೇವೆ. ಬರೀ ಸದನಕ್ಕಷ್ಟೇ ಅಲ್ಲ, ಸಹಕಾರ ಕ್ಷೇತ್ರ, ಶಿಕ್ಷಣ ಕ್ಷೇತ್ರ – ಹೀಗೆ ಬಹುಮುಖ ಸೇವೆಯನ್ನು ಅವರು ನಮ್ಮ ರಾಜ್ಯಕ್ಕೆ ಕೊಟ್ಟು ನಮ್ಮನ್ನು ಅಗಲಿದ್ದಾರೆ. ಅವರನ್ನು ನಾನು ಮಾತನಾಡಿಸುವುದಕ್ಕೂ ಆಗಲಿಲ್ಲ.

ಮೊದಲು ನರ್ಸಿಂಗ್ ಹೋಮಿಗೆ ಸೇರಿದಾಗ ನೋಡಿದ್ದೆ. ಅನಂತರ ಅವರನ್ನು ಬೊಂಬಾಯಿಗೆ ಷಿಫ್ಟ್ ಮಾಡುತ್ತಾರೆಂಬ ವಿಚಾರ ಬಂದಾಗ ನಾನು ಊರಿನಲ್ಲಿರಲಿಲ್ಲ. ನಾನು ಬರುವುದರೊಳಗೆ ಅವರು ಅಂತಿಮ ಘಟ್ಟ ಮುಟ್ಟಿದ್ದರು ಎಂದು ಗೊತ್ತಾದಾಗ ಎಂ.ಎಸ್.ರಾಮಯ್ಯ ಆಸ್ಪತ್ರೆಗೆ ಹೋಗುವ ಹೊತ್ತಿಗೆ ಅವರ ನಿಧನದ ವಾರ್ತೆ ನಮಗೆ ತಲುಪಿತ್ತು. ಹೀಗೆ ಬಿ.ಎಂ.ಪಾಟೀಲರು ಅಗಲಿ ಹೋಗಿದ್ದಾರೆ. ಇದೊಂದು ಭಾರಿ ನಷ್ಟ. ಈ ಸದನಕ್ಕಂತೂ ಕರ್ನಾಟಕ ರಾಜ್ಯಕ್ಕಂತೂ ಭಾರಿ ನಷ್ಟ. ದುಃಖದಲ್ಲಿ ಅವರ ಕುಟುಂಬ ಏನು ಮುಳುಗಿದೆ ಅದರಲ್ಲಿ ನಾವೂ ಕೂಡ ಪಾಲ್ಗೊಂಡಿದ್ದೇವೆ. ಈ ಸದನವೂ ಕೂಡ ದುಃಖದಲ್ಲಿ ಭಾಗಿಯಾಗುತ್ತದೆ ಎಂಬ ಮಾತನ್ನು ಈ ಸಂದರ್ಭದಲ್ಲಿ ತಿಳಿಸುತ್ತಿದ್ದೇನೆ. ನಂತರ ಶ್ರೀಮಾನ್ ಜಿ.ಪಾಪಣ್ಣನವರು. ಅವರು ನನಗೆ ಅಷ್ಟೊಂದು ಸಂಪರ್ಕ ಇಲ್ಲದಿದ್ದರೂ ಕೂಡ ಅವರು ಅತ್ಯಂತ ಹಿರಿಯರು ಎನ್ನತಕ್ಕ ವಿಚಾರವನ್ನು ಕೇಳಿದ್ದೇನೆ. ಅವರು

1952ರಿಂದ 1957ರವರೆಗೆ ವಿಧಾನಸಭಾ ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆ. ಅವರು ಭೂದಾನ ಚಳುವಳಿಗೆ ಗಮನ ಕೊಟ್ಟಿರಬೇಕಾದರೆ, ಯಾವ ರೀತಿಯ ತ್ಯಾಗದ ಮನೋಭೂಮಿಕೆ ಅವರಲ್ಲಿ ಸಿದ್ಧವಾಗಿರಬೇಕು ಎಂಬ ವಿಚಾರ ತಿಳಿದುಕೊಳ್ಳಬೇಕಾಗಿದೆ. ಒಂದು ಅತ್ಯುನ್ನತವಾದ ಚಿಂತನೆಯನ್ನು ಈ ರಾಷ್ಟ್ರಕ್ಕೆ ಆ ಮಹಾನ್ ವ್ಯಕ್ತಿ ಕೊಟ್ಟು ಹೋದರು. ಆ ಚಳುವಳಿಯಲ್ಲಿ ಅವರು ಭಾಗವಹಿಸಿದ್ದರು. ಅವರ ಅಗಲಿಕೆಯಿಂದ ನಮಗೆಲ್ಲರಿಗೂ ನಷ್ಟವಾಗಿದೆ. ಶ್ರೀಮಾನ್ ಪ್ರಣಬ್ಜ ಅವರು ರಾಜ್ಯಾಂಗದ ಪ್ರಕಾರ ಅದೇ ಒಂದು ವರ್ಗಕ್ಕೆ ಸೇರಿದ ಪ್ರಮುಖ ರಾಜಕಾರಣಿಯಾಗಿ ಕರ್ನಾಟಕ ಏಕೀಕರಣ ಆದ ಮೇಲೆ ನಮಗೆ ಸೇರಿದ ಧೀಮಂತ ವ್ಯಕ್ತಿಯಾಗಿದ್ದರು. ಅವರು ಸಚಿವರಾಗಿ ಕೇಂದ್ರದಲ್ಲಿ ಕೂಡ ಇದ್ದು ದೊಡ್ಡ ದೊಡ್ಡ ಖಾತೆಗಳನ್ನು ನಿರ್ವಹಣೆ ಮಾಡುವುದರಲ್ಲಿ ಅತ್ಯುನ್ನತ ಸೇವೆಯನ್ನು ರಾಷ್ಟ್ರಕ್ಕೆ ಸಲ್ಲಿಸಿದ್ದಾರೆ. ಅವರ ಅಗಲಿಕೆಯಿಂದಲೂ ಬಹಳ ದೊಡ್ಡ ನಷ್ಟವಾಗಿದೆ. ಅವರು ಒರಿಸ್ಸಾ, ಮಧ್ಯಪ್ರದೇಶ ಇತ್ಯಾದಿ ರಾಜ್ಯಗಳಲ್ಲಿ ರಾಜ್ಯಪಾಲರಾಗಿ ಸೇವೆ ಸಲ್ಲಿಸಿದ್ದಾರೆ. ಅವರ ಅಗಲಿಕೆಯಿಂದ ಅವರ ಕುಟುಂಬ ದುಃಖದಲ್ಲಿ ಮುಳುಗಿದೆ. ಈ ಸದನವೂ ಆ ದುಃಖದಲ್ಲಿ ಪಾಲ್ಗೊಂಡಿದೆ. ಶ್ರೀಮಾನ್ ಜೆ.ಎಸ್.ದೇಸ್‌ಮುಖ್ ಅವರು ನಿಧನರಾಗಿದ್ದಾರೆ. ಅವರು ಅಸೆಂಬ್ಲಿಯಲ್ಲಿ ಹೇಗೆ ಮಾತನಾಡುತ್ತಿದ್ದರು ಎಂಬುದು ನಮಗೆಲ್ಲರಿಗೂ ಗೊತ್ತು. ನಿಜವಾಗಿಯೂ ಎಷ್ಟೊಂದು ಸಂತೋಷವಾಗುತ್ತಿತ್ತು ಎಂದರೆ, ಅವರು ಕನ್ನಡ ಮಾತನಾಡಬೇಕಾದರೆ ಅಷ್ಟೊಂದು ನಿರರ್ಗಳವಾಗಿ ಮಾತನಾಡತಕ್ಕ ಕನ್ನಡ ಅವರ ಹತ್ತಿರ ಇರಲಿಲ್ಲ. ಆದರೆ ವ್ಯಕ್ತಿಶಃ ಅವರನ್ನು ನೋಡಿ ಸದನದ ಎಲ್ಲಾ ವರ್ಗದವರೂ ಮೆಚ್ಚುಗೆ ಸೂಚಿಸುತ್ತಿದ್ದರು. ಅದು ನಿಮಗೆಲ್ಲರಿಗೂ ಗೊತ್ತಿರತಕ್ಕ ವಿಚಾರ. ಅಂಥ ಸರಳ, ಒಳ್ಳೆಯ ವ್ಯಕ್ತಿಯನ್ನು ನಾವು ಕಳೆದುಕೊಂಡಿದ್ದೇವೆ. ಅದು ತುಂಬಲಾರದ ನಷ್ಟ. ಇನ್ನು ಶ್ರೀ ಎಸ್.ಎಸ್.ಕಡಪಟ್ಟಿಯವರು. ಮಾನ್ಯ ಪಾಪಣ್ಣನವರು ಒಬ್ಬರನ್ನು ಬಿಟ್ಟರೆ ಮಿಕ್ಕ ಎಲ್ಲರನ್ನೂ ನಾವು ಈ ಸದನದಲ್ಲಿ ನೋಡಿರತಕ್ಕದ್ದು ಇದೆ. ಮಾನ್ಯ ಕಡಪಟ್ಟಿಯವರು ಪುನಗುಂದದಿಂದ ಗೆದ್ದು ಬಂದಿದ್ದರು. ಮಾನ್ಯ ಕಡಪಟ್ಟಿಯವರು ಸದನದಲ್ಲಿ ಪ್ರಶ್ನೆ ಹಾಕುತ್ತಿದ್ದುದು, ವಿವರ ಪಡೆಯುತ್ತಿದ್ದುದು ನೋಡಿದರೆ ಅವರು ತಮ್ಮ ಕರ್ತವ್ಯವನ್ನು ಬಹಳ ಮೆಚ್ಚುಗೆಯಿಂದ ದೊಡ್ಡ ಜವಾಬ್ದಾರಿಯಿಂದ ನಡೆಸುತ್ತಿದ್ದರು. ಅವರ ಅಗಲುವಿಕೆಯಿಂದ ರಾಜ್ಯಕ್ಕೆ ಹಾಗೂ ಸದನಕ್ಕೆ ತುಂಬಲಾರದ ನಷ್ಟವಾಗಿದೆ. ಇನ್ನು ಮಾನ್ಯ ಟಿ.ಆರ್.ಶಾಮಣ್ಣನವರ ವಿಚಾರವಂತೂ very long innings he has in the political area. He has very long innings. ನಾನು 1967ರಲ್ಲಿ ಈ ಸದನಕ್ಕೆ ಸದಸ್ಯನಾಗಿ ಬಂದಾಗಿನಿಂದಲೂ ಉದ್ದಕ್ಕೂ ಅವರನ್ನು ನೋಡಿದ್ದೇನೆ. ಸದನದಲ್ಲಿ ಯಾವುದೇ ಡಿಮ್ಯಾಂಡ್ ಬಂದಾಗಲೂ ಕಟ್ ಮೋಷನ್ ಕೊಡುತ್ತಿದ್ದ ವ್ಯಕ್ತಿ. ಯಾವುದೇ ಡಿಮ್ಯಾಂಡ್ ಬಂದರೂ ಕೂಡ ಅವರಿಂದ ಕಟ್‌ಮೋಷನ್ ಗ್ಯಾರಂಟಿಯಾಗಿ ಇರುತ್ತಿತ್ತು. ಕಟ್ ಮೋಷನ್‌ಗೆ ಅವರು ಎತ್ತಿದ ಕೈ. ಕಟ್ ಮೋಷನ್ ಅರ್ಥ ಏನು ಅದನ್ನು ಏಕೆ ಹಾಕಬೇಕು, ಅದರ ಉಪಯೋಗ ಏನು, ಯಾವಾಗ ಉಪಯೋಗಿಸಬೇಕೆಂದು ತಿಳಿದಿರುವವರು ಬಹಳ ಕಡಿಮೆ ಇದ್ದಾರೆ. ಆದರೆ ಟಿ.ಆರ್.ಶಾಮಣ್ಣನವರು ಅದರ ಅನುಭವದಲ್ಲಿ ಎತ್ತಿದ ಕೈ. ಯಾರೂ ಇಲ್ಲದಿದ್ದರೂ ಟಿ.ಆರ್.ಶಾಮಣ್ಣನವರ ಕಟ್ ಮೋಷನ್ ಇರುತ್ತದೆ ಎಂದು ಆ ಸಂದರ್ಭದಲ್ಲಿ ನಾವು ಅಂದುಕೊಳ್ಳುತ್ತಿದ್ದೆವು. ಅಷ್ಟೊಂದು ಅನುಭವ,

ಆಳವಾದ ಅಭ್ಯಾಸ, ಜನತೆಯ ಬಹುಮುಖ ಸೇವೆ ಆಮೋಘ. ಅಂತೂ ಶಾಮಣ್ಣನವರು ಜನತೆಯನ್ನು ಹುಡುಕಿಕೊಂಡು ಹೋದವರಲ್ಲ. ನಾನು ನೋಡಿದ ಹಾಗೆ ಜನತೆ ಶಾಮಣ್ಣನವರನ್ನು ಹುಡುಕಿಕೊಂಡು ಹೋಗುತ್ತಿದ್ದರು. ಅವರು ವಿಧಾನಪತಿಷತ್ತಿನ ಸದಸ್ಯರೂ ಆಗಿದ್ದರು. ಲೋಕಸಭೆಯ ಸದಸ್ಯರಾಗಿದ್ದರು. ಅವರ ಸೇವೆ ಶ್ಲಾಘನೀಯ. ಅವರ ಅಗಲುವಿಕೆ ತುಂಬಲಾರದ ನಷ್ಟ. ಆ ದುಃಖದಲ್ಲಿ ನಾವೆಲ್ಲರೂ ಭಾಗಿಯಾಗಿದ್ದೇವೆ. ಅದೇ ರೀತಿ ಶ್ರೀ ಎಸ್.ಎಂ.ಲಿಂಗಪ್ಪನವರು. ಅವರನ್ನು 1978-83ರ ಆರನೇ ವಿಧಾನಸಭೆಯಲ್ಲಿ ನಾವು ನೋಡಿದ್ದೇವೆ. ಅವರ ಸೇವೆ ಕೂಡಾ ಬಹಳ ದೊಡ್ಡ ಸೇವೆ. ಅವರ ಅಗಲುವಿಕೆ ಬಹಳ ದೊಡ್ಡ ನಷ್ಟ. ಅದೇ ರೀತಿ ಹೆಚ್.ಟಿ.ಕೆಂಚೇಗೌಡರ ವಿಚಾರ. ಅವರನ್ನು ನಿಜವಾಗಿಯೂ ಮರೆಯುವುದಕ್ಕೆ ಸಾಧ್ಯವಿಲ್ಲ. ಅವರ ಮಾತು ಅಷ್ಟೊಂದು ಲಾಲಿತ್ಯವಾಗಿರುತ್ತಿತ್ತು. ಅವರ ಮಾತನ್ನು ಕೇಳುವುದಕ್ಕೆ ಚೆನ್ನ. ಮಾನ್ಯ ಅಧ್ಯಕ್ಷರೆ, ಅವರ ಪರಿಚಯ ತಮಗೆ ಬಹಳ ಚೆನ್ನಾಗಿ ಇದೆ. ನಿಜವಾಗಿಯೂ ಕೆಂಚೇಗೌಡರ ಜೊತೆ ಇದ್ದರೆ ಒಂದು ಖುಷಿ. ಅವರ ಅಗಲುವಿಕೆ ಬಹಳ ದೊಡ್ಡ ನಷ್ಟ. ಮತ್ತೆ ಡಾ॥ ತಿಪ್ಪೇಸ್ವಾಮಿಯವರು. ಅವರು ಬಹಳ ಕಡಿಮೆ ಮಾತನಾಡುತ್ತಿದ್ದರೂ ಬಹಳ ತೂಕವಾಗಿ ಮಾತನಾಡತಕ್ಕವರಾಗಿದ್ದರು. ಅವರು ವೈದ್ಯರಾದರೂ ಅವರು ಸದನದ ಸದಸ್ಯರಾಗಿ ಬಂದಮೇಲೆ ಅವರ ಸಾರ್ವಜನಿಕ ಸೇವೆ ನಮಗೆ ಸ್ಪಷ್ಟವಾಗಿ ಮೂಡಿಬಂತು. ಅವರು ಶಿಕ್ಷಣ ಕ್ಷೇತ್ರದಲ್ಲೂ ಬಹಳ ದೊಡ್ಡ ಸೇವೆ ಸಲ್ಲಿಸಿದಂತಹ ಮಹನೀಯರು. ಸಾರ್ವಜನಿಕ ಕ್ಷೇತ್ರದಲ್ಲಿ ಒಳ್ಳೆಯ ಗುಣವಿಶೇಷಣ ಹೊಂದಿರುವವರಲ್ಲಿ ಇವರೂ ಒಬ್ಬರಾಗಿ ಮುಂದುವರಿದಿದ್ದರು. ಅವರ ಅಗಲುವಿಕೆಯು ನಷ್ಟ ಬರೀ ಸದನಕ್ಕೆ ಅಷ್ಟೇ ಅಲ್ಲ, ರಾಜ್ಯಕ್ಕೆ ತುಂಬಲಾರದ ನಷ್ಟ. ಅವರ ಗುಣವಿಶೇಷ, ಪರಂಪರೆ, ರಾಜಕಾರಣದ ಬಗ್ಗೆ ಇಲ್ಲಿ ವಿಶೇಷವಾಗಿ ಮಾತನಾಡಿದರೆ ತಪ್ಪಾಗಲಾರದು ಎಂದು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರುತ್ತಿದ್ದೇನೆ. ಮತ್ತೆ ಬಿ.ಎಲ್.ನಾರಾಯಣಸ್ವಾಮಿಯವರು 1967ರಿಂದಲೂ, ನಮ್ಮ ಜೊತೆ ಇದ್ದರು. ಅದಕ್ಕಿಂತ ಮೊದಲೂ ಇದ್ದರು. ಇಂತಹ ಮಹನೀಯರ ಅಪಾರವಾದ ಸೇವೆಯನ್ನು ನಮ್ಮ ರಾಜ್ಯ ಈ ಸದನದ ಮುಖಾಂತರ ಜನತೆ ಪಡೆದುಕೊಂಡಿದೆ. ನಷ್ಟ ಅಗಲುವಿಕೆಯಿಂದ ಉಂಟಾಗುತ್ತದೆ. ದುಃಖ ಸಹಜವಾಗಿ ಉತ್ಪನ್ನವಾಗುತ್ತದೆ. ಇವರ ಅಗಲುವಿಕೆಯಿಂದ ಅವರ ಕುಟುಂಬವರ್ಗದವರಿಗೆ ಆಗಿರತಕ್ಕ ದುಃಖದಲ್ಲಿ ಸರ್ಕಾರ, ಈ ಸದನದ ನಾವೆಲ್ಲರೂ ಭಾಗಿಯಾಗಿದ್ದೇವೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಈ ಎಲ್ಲ ಮೃತರ ಆತ್ಮಕ್ಕೆ ದೇವರು ಶಾಂತಿಯನ್ನು ನೀಡಲಿ ಎಂದು ಈ ಸಂದರ್ಭದಲ್ಲಿ ವ್ಯಕ್ತಪಡಿಸಿ, ಅವರ ಕುಟುಂಬವರ್ಗದವರ ದುಃಖದಲ್ಲಿ ನಾವೆಲ್ಲರೂ ಭಾಗಿಯಾಗಿದ್ದೇವೆ ಎನ್ನತಕ್ಕಂಥ ಮಾತನ್ನು ಹೇಳಿ, ಈ ನಿರ್ಣಯವನ್ನು ನಾವೆಲ್ಲರೂ ಸೇರಿ ಅಂಗೀಕಾರ ಮಾಡಿ ಅವರ ಕುಟುಂಬವರ್ಗದವರಿಗೆ ಕಳುಹಿಸುವದರಲ್ಲಿ ನಮ್ಮ ಜವಾಬ್ದಾರಿಯನ್ನು ನಿರ್ವಹಣೆ ಮಾಡೋಣ. ನಮಸ್ಕಾರ.

† ಶ್ರೀ ಡಿ.ಬಿ. ಚಂದ್ರೇಗೌಡ: (ವಿರೋಧಪಕ್ಷದ ನಾಯಕರು):- ಸನ್ಮಾನ್ಯ ಅಧ್ಯಕ್ಷರೆ, ತಾವು ಮತ್ತು ಶ್ರೀಮಾನ್ ಬಂಗಾರಪ್ಪನವರು ಅಭಿವ್ಯಕ್ತ ಮಾಡಿದಂತಹ ಭಾವನೆಗಳಿಗೆ ಧ್ವನಿಗೂಡಿಸುತ್ತಾ, ಶ್ರೀಮಾನ್ ಕಮಲಾಪತಿ ತ್ರಿಪಾಠಿಯವರ ನಿಧನದಿಂದ ಗಾಂಧಿಯುಗದ ಸ್ವಲ್ಪ ಹೆಚ್ಚು ಕಡಿಮೆ ಕೊನೆಯ ಕೊಂಡಿ ಕಳಚಿತೆಂದು ನಾನು ಅಂದುಕೊಂಡಿದ್ದೇನೆ. ಕರ್ನಾಟಕದ ಅನೇಕ ದಿಗ್ಗಜಗಳು ವಿವಿಧ ಮುಖಗಳಲ್ಲಿ ಸೇವೆ ಮಾಡಿರತಕ್ಕ ಅಂದರೆ ಸಾಮಾಜಿಕ ಕ್ಷೇತ್ರದಲ್ಲಿ, ಶೈಕ್ಷಣಿಕ ಕ್ಷೇತ್ರದಲ್ಲಿ ರಾಜಕಾರಣದಲ್ಲಿ ಎಲ್ಲಕ್ಕಿಂತ ಮೇಲಾಗಿ ಸದನದಲ್ಲಿ ಕೆಲಸ ಮಾಡಿದಂತಹ ಪ್ರಮುಖ ಮಹನೀಯರನ್ನು ಕಳೆದುಕೊಂಡಿದ್ದೇವೆ. ಶ್ರೀ ಬಿ.ಎಂ. ಪಾಟೀಲರ ನಿಧನ, ಬಿಜಾಪುರ ಜಿಲ್ಲೆಯ ಮೂರು ಜನ ಮಹಾ ಮುಖಂಡರು. ಏಕಕಾಲಕ್ಕೆ ಮರಣ ಹೊಂದಿದ್ದು ದುರ್ದೈವದ ಸಂಗತಿ. ಶ್ರೀ ಬಿ.ಎಂ.ಪಾಟೀಲರು ತೀರಿಕೊಂಡಾಗ ಸರ್ಕಾರ ನಡೆದುಕೊಂಡ ರೀತಿ ನನಗೆ ಸಮಾಧಾನ ತರದಿದ್ದರೂ, ಅವರು ಆತ್ಮೀಯ ಮಿತ್ರರು, ಪಕ್ಷಾತೀತವಾದ ಸ್ನೇಹವನ್ನು ಮೈಗೂಡಿಸಿಕೊಂಡಿದ್ದರು. ನನಗೆ ವಿಶೇಷವಾಗಿ, ಅನೇಕ ಸಂದರ್ಭಗಳಲ್ಲಿ ಬಿಜಾಪುರ ಜಿಲ್ಲೆಯಲ್ಲಿ ಪ್ರವಾಸವನ್ನು ಯಾವ ಕಾಲದಲ್ಲಿ ಮಾಡಿದರೂ ಅವರು ಒಬ್ಬ ಹಿರಿಯ ಅಣ್ಣನಾಗಿ ನಮಗೆ ಜಿಲ್ಲೆಯ ಮಾರ್ಗದರ್ಶನ ಮಾಡಿದ್ದುಂಟು. ಹಾಗೆಯೇ ಶ್ರೀಮಾನ್

ದೇಶಮುಖ್ ಅವರನ್ನು ನೆನಸಿಕೊಂಡರೆ, ಸಹಸ್ರಾರು ಎಕರೆಯ ಭೂಮಿಯ ಮಾಲೀಕರಾಗಿದ್ದು ತನ್ನ ಎಲ್ಲ ಆಸ್ತಿಯನ್ನು ಒಂದು ರೂಪಾಯಿಯನ್ನು ಸಹ ಅಪೇಕ್ಷೆ ಪಡದೇ ಅದನ್ನು ರೈತರಿಗೆ ಬರೆದು ಕೊಟ್ಟಿರುವುದರ ಜೊತೆಗೆ ಆ ಭೂಮಿಗೆ ಸರ್ಕಾರದಿಂದ ಬಂದಂತಹ ಪರಿಹಾರಧನ ಸುಮಾರು 25 ಲಕ್ಷ ರೂಪಾಯಿಗಳನ್ನು ಆಯಾಯ ರೈತರನ್ನು ಕರೆದು ಹಂಚಿದಂತಹ ಮಹಾನ್ ವ್ಯಕ್ತಿ. ಅಂತಹವರು ಬಹಳ ವಿರಳ. ನಾವು ಅವರನ್ನು ಆ ಸಮಯದಲ್ಲಿ ನೋಡುವುದಕ್ಕೆ ಸಾಧ್ಯವಾಗದಿದ್ದರೂ ಅವರು ತೀರಿಕೊಂಡ ಕೆಲವು ದಿವಸಗಳ ನಂತರ ಹೋದಾಗ, ಸುಮಾರು ನಾಲ್ಕೈದು ಸಾವಿರ ಜನ ಸೇರಿದ್ದರು. ಆಗ ನಮಗೆ ತಿಳಿಯಿತು. ಅವರು ಸತ್ತಾಗ ಸರಿ ಸುಮಾರು ಒಂದು ಲಕ್ಷಕ್ಕೂ ಹೆಚ್ಚು ಜನ ಸೇರಿ ಶ್ರದ್ಧಾಂಜಲಿ ಅರ್ಪಿಸಿದ್ದರು ಎಂದು. ಅವರು ಆಗರ್ಭಶ್ರೀಮಂತರಾದರೂ, ಶ್ರೀಮಂತಿಕೆ ಬರೀ ಹಣದಿಂದ ಅಲ್ಲ, ಎಲ್ಲ ಶ್ರೀಮಂತಿಕೆಯನ್ನು ಅವರು ಮೈಗೂಡಿಸಿಕೊಂಡಿದ್ದರು. ಅವರ ನಿಧನ, ಶ್ರೀ ಎಸ್.ಎಸ್.ಕಡಪಟ್ಟಿಯವರ ನಿಧನ ಮತ್ತು ಶ್ರೀಮಾನ್ ಶಾಮಣ್ಣನವರ ನಿಧನ ನಮ್ಮ ಪಕ್ಷಕ್ಕಂತೂ ತುಂಬಲಾರದ ನಷ್ಟ. ಕಡಪಟ್ಟಿಯವರಿಗೆ ತೀರಾ ಚಿಕ್ಕ ವಯಸ್ಸಿನಲ್ಲಿ ಈ ದುರಂತ ಆದದ್ದು ನಮಗೆಲ್ಲರಿಗೂ ದುಃಖವನ್ನು ತರತಕ್ಕ ಸಂಗತಿ. ನಾವು ಅಲ್ಲಿಗೆ ಹೋದಾಗ ಕೂಡ ಅವರು ಎಷ್ಟರಮಟ್ಟಿಗೆ ಜನಪ್ರೀತಿಯನ್ನು ಸಂಪಾದನೆ ಮಾಡಿದ್ದರು ಎನ್ನುವುದು ತಿಳಿಯಿತು. ನಾವು ಅಲ್ಲಿಗೆ ಹೋದಾಗ ಜನ ಅವರ ಬಗ್ಗೆ ಕಣ್ಣೀರು ಇಡುತ್ತಿದ್ದ ರೀತಿಯನ್ನು ನೋಡಿದಾಗ ನಿಜವಾಗಿಯೂ ಸಂಕಟಪಟ್ಟಿವು.

ಶ್ರೀಮಾನ್ ಶಾಮಣ್ಣನವರು ಅಂದರೆ ಉಳಿದ ವಿಚಾರ ಎಲ್ಲಕ್ಕಿಂತ ಹೆಚ್ಚಾಗಿ ನಗರದ ನಿಜವಾದ ಪ್ರತಿನಿಧಿ ಯಾರಾದರೂ ಇದ್ದರೆ ಅವರು ಶಾಮಣ್ಣನವರು. ಅವರು ಬೆಂಗಳೂರು ನಗರದ Sri Shamanna is a moving encyclopedia. ಯಾವ ಸಮಯದಲ್ಲಿ ಬೆಂಗಳೂರು ನಗರದ ವಿಚಾರದ ಬಗ್ಗೆ ಏನು ಕೇಳಿದರೂ ಹೇಳುವಷ್ಟು ಅವರು ಕರಗತ ಮಾಡಿಕೊಂಡಿದ್ದರು. ಅವರು ನಿಷ್ಠೂರವಾದಿ. ನಾನು ಒಂದು ಪಕ್ಷಕ್ಕೆ ಸೇರಿದ್ದೇನೆ, ನಮ್ಮ ಪಕ್ಷದ ಸರ್ಕಾರ ಇದೆ, ಸರ್ಕಾರ ತೆಗೆದುಕೊಂಡಿರತಕ್ಕ ತೀರ್ಮಾನವನ್ನು ವಿರೋಧ ಮಾಡಬಾರದು ಎನ್ನತಕ್ಕಂಥ ನಿಯಮಗಳನ್ನು ಮೀರಿದಂತಹ ಮನುಷ್ಯ. ಜನರ ಹಿತಕ್ಕೆ ವಿರೋಧವಾದಂಥ ಯಾವುದಾದರೂ ನಿರ್ಣಯಗಳು ಬಂದರೆ, ಮೊದಲನೆಯ ವಿರೋಧ ಶಾಮಣ್ಣನವರಿಂದ ನಮ್ಮ ಪಕ್ಷಕ್ಕೆ ಬರುತ್ತಿತ್ತು. ಬೆಂಗಳೂರು ನಗರದ ಗಲ್ಲಿ ಗಲ್ಲಿಗಳ ಪರಿಚಯ, ಮನೆ ಮನೆಗಳ ಪರಿಚಯ ಇದ್ದಂತಹ ಒಬ್ಬ ಮಹಾನ್ ವ್ಯಕ್ತಿಯನ್ನು ನಾವು ಕಳೆದುಕೊಂಡಿದ್ದೇವೆ. ಈ ರಾಜ್ಯ, ದೇಶಕ್ಕಿಂತ ಹೆಚ್ಚಾಗಿ ನಮ್ಮ ಪಕ್ಷ ಬಡವಾಗಿದೆಯೆಂದು ನಾನು ವಿನಮ್ರವಾಗಿ ಹೇಳುವುದಕ್ಕೆ ಬಯಸುತ್ತೇನೆ.

ಶ್ರೀಮಾನ್ ಎಸ್.ಎಂ. ಲಿಂಗಪ್ಪನವರು ಒಂದು ರೀತಿಯ ಯೋಗಿ. ತನ್ನದೆನ್ನುವುದು ಏನು ಇಲ್ಲ. ಮದುವೆ ಇಲ್ಲ. ಮಕ್ಕಳಿಲ್ಲ, ಸಮಾಜವೇ ನನ್ನ ಆಸ್ತಿ ಎಂದು ಬದುಕಿನುದ್ದಕ್ಕೂ ದುಡಿದಂತಹ ಮಹಾನ್ ವ್ಯಕ್ತಿ. ಹಾಗೆಯೇ ಶ್ರೀಮಾನ್ ಕೆಂಚೇಗೌಡರು ಸಹ. ಶ್ರೀಮಾನ್ ಬಿ.ಎಂ. ತಿಪ್ಪೇಸ್ವಾಮಿಯವರು 1960ರ ಸುಮಾರಿನಲ್ಲಿ ಅವರು ವೈದ್ಯರಾಗಿದ್ದಾಗಿನಿಂದ ನನಗೆ ಪರಿಚಯ. ಅದು ಸ್ನೇಹವಾಗಿ ಪರಿಣಮಿಸಿ, ಅನೇಕ ದಿವಸಗಳ ಕಾಲ ಅವರ ಜೊತೆ ಕೆಲಸಮಾಡತಕ್ಕ ಸದಾವಕಾಶ ನನ್ನ ಭಾಗಕ್ಕೆ ಬಂದಿತ್ತು. ಅವರು ಎಷ್ಟೇ ತೊಂದರೆಯಾದರೂ ಕೂಡ, ಪಕ್ಷದ ಸೈದ್ಧಾಂತಿಕ ಭಿನ್ನಾಭಿಪ್ರಾಯ ಬಂದಾಗ ಸಿಡಿದೆದ್ದು ಹೊರನಡೆದು ಒಂದು ಪಕ್ಷದ ಅಧ್ಯಕ್ಷರಾಗಿ ಮತ್ತು ರಾಜ್ಯದ ದೀನರು ದಲಿತರ ಹಿತಕ್ಕಾಗಿ ಹಗಲಿರುಳು ಶ್ರಮಿಸಿದ ಒಬ್ಬ ಮಹಾವ್ಯಕ್ತಿ. ಅವರ ನಿಧನದಿಂದ ನಾಡಿಗೆ ಒಂದು ರೀತಿಯ ತುಂಬಲಾರದ ನಷ್ಟವಾಗಿದೆ. ಶ್ರೀಮಾನ್ ಬಿ.ಎಲ್.ನಾರಾಯಣಸ್ವಾಮಿಯವರು ಸ್ವಾತಂತ್ರ್ಯ ಹೋರಾಟಗಾರರು. ಇತ್ತೀಚಿನ ದಿವಸಗಳಲ್ಲಿ ಅವರ ನೆನಪು ನಮಗೆ ಸ್ವಲ್ಪ ಮಾಸಿ ಹೋಗಿತ್ತು. ಸತ್ತಾಗ ನೆನಪು ಮಾಡಿಕೊಳ್ಳುತ್ತೇವೆ. ಬದುಕಿದ್ದಾಗ ಅವರು ಹೇಗೆ ಬದುಕಿ ಸತ್ತಿದ್ದಾರೆ ಎನ್ನುವುದರ ಪರಿಚಯವಾಗಲೀ, ಆ ದಿಸೆಯಲ್ಲಿ ಕೆಲಸ ಮಾಡತಕ್ಕಂಥ ಪ್ರಯತ್ನವಾಗಲೀ ನಾವು ಮಾಡುವುದಿಲ್ಲ. ಈ ಎಲ್ಲ ಮೃತರಿದ ಈ ರಾಜ್ಯಕ್ಕೆ ಆಗಿರತಕ್ಕಂಥ, ರಾಷ್ಟ್ರಕ್ಕೆ ಆಗಿರತಕ್ಕಂಥ, ಜನಮನಕ್ಕೆ ಆಗಿರತಕ್ಕಂಥ, ವಿವಿಧ ಕ್ಷೇತ್ರಗಳಲ್ಲಿ ಆಗಿರತಕ್ಕಂಥ ಸೇವೆಯನ್ನು ಸ್ಮರಿಸಿಕೊಂಡು ಅವರ ಕುಟುಂಬಗಳಿಗೆ, ಸ್ನೇಹಿತರಿಗೆ

ಮತ್ತು ಅವರ ಹಿತೈಷಿಗಳಿಗೆ ಆಗಿರತಕ್ಕಂಥ ನೋವಿನಲ್ಲಿ ನಾನು ಮತ್ತು ನಮ್ಮ ಪಕ್ಷದವರು ಭಾಗಿಯಾಗಿ ತಾವು ನಮ್ಮ ಪರವಾಗಿ ಅವರಿಗೆ ನಮ್ಮ ಸಂತಾಪವನ್ನು ಸಲ್ಲಿಸಬೇಕೆಂದು ಹೇಳಿ, ತಮ್ಮನ್ನು ಈ ಮೂಲಕ ಪ್ರಾರ್ಥನೆ ಮಾಡಿಕೊಂಡು, ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಬಿ.ಎಸ್. ಯಡಿಯೂರಪ್ಪ(ಶಿಕಾರಿಪುರ):– ಸನ್ಮಾನ್ಯ ಅಧ್ಯಕ್ಷರೇ, ಈ ರಾಜ್ಯದಲ್ಲಿ ಮತ್ತೆ ರಾಷ್ಟ್ರೀಯ ಮಟ್ಟದಲ್ಲಿ ಈ ನಾಡಿಗೆ ಸೇವೆ ಸಲ್ಲಿಸಿದಂಥ ಹನ್ನೊಂದು ಜನ ಪ್ರಮುಖರು ದೈವಾಧೀನರಾದಂಥ ಒಂದು ದುಃಖದ ಸಂದರ್ಭದಲ್ಲಿ ಈ ಸದನ ಅವರ ಕುಟುಂಬಕ್ಕೆ ಈ ಒಂದು ದುಃಖವನ್ನು ತಡೆದುಕೊಳ್ಳುವಂಥ ಶಕ್ತಿ ಕೊಡಲಿ ಎಂದು ಪ್ರಾರ್ಥನೆ ಮಾಡುವಂಥಾದ್ದು ಮತ್ತು ಅವರ ಆತ್ಮಕ್ಕೆ ಶಾಂತಿ ಕೋರುವಂಥಾದ್ದು ಈ ಸದನದ ನಮ್ಮೆಲ್ಲರ ಕರ್ತವ್ಯ. ಇದೇ ಪ್ರತಿಪಾಠದಂತೆ ಈ ಒಂದು ಕೆಲಸವನ್ನು ನಾವು ಮಾಡುತ್ತಿದ್ದೇವೆ. ಹಿರಿಯರಾದಂಥ ಕಾಂಗ್ರೆಸ್ಸಿನ ಮುಖಂಡರೂ, ಗಾಂಧಿವಾದಿಗಳೂ ಆದ ಶ್ರೀ ಕಮಲಾಪತಿ ತ್ರಿಪಾಠಿ, ಬಿ.ಎಂ. ಪಾಟೀಲ್, ಜಿ. ಪಾಪಣ್ಣ, ಸಿ.ಎಂ. ಪೂಣಚ್ಚ, ಜೆ.ಎಸ್. ದೇಶಮುಖ್, ಎಸ್.ಎಸ್. ಕಡಪಟ್ಟಿ, ಟಿ.ಆರ್. ಶಾಮಣ್ಣ, ಎಸ್.ಎಂ. ಲಿಂಗಪ್ಪ, ಎನ್.ಬಿ. ಕೆಂಚೇಗೌಡ, ಡಾ: ಬಿ.ಎಂ. ತಿಪ್ಪೇಸ್ವಾಮಿ, ಹಾಗೂ ಬಿ.ಎಲ್. ನಾರಾಯಣಸ್ವಾಮಿ ಇವರುಗಳು ಇವತ್ತು ನಮ್ಮನ್ನು ಅಗಲಿದ್ದಾರೆ, ದೈವಾಧೀನರಾಗಿದ್ದಾರೆ. ಬಹಳ ಹತ್ತಿರದಿಂದ ಶ್ರೀಯುತರಾದ ಟಿ.ಆರ್ . ಶಾಮಣ್ಣನವರನ್ನು, ದೇಶ್‌ಮುಖ್ ಅವರನ್ನು, ಡಾ: ತಿಪ್ಪೇಸ್ವಾಮಿಯವರನ್ನು ನೋಡುವಂಥ ಅವಕಾಶ, ಅವರು ಮಾಡುವಂಥ, ಕಾರ್ಯವನ್ನು ಹತ್ತಿರದಿಂದ ಕಾಣುವಂಥ ಅವಕಾಶ ನನಗಂತೂ ವಿಶೇಷವಾಗಿ ಸಿಕ್ಕಿತ್ತು. ಬಹುಶಃ ಒಬ್ಬ ಜನತಾ ಪ್ರತಿನಿಧಿ ಯಾವರೀತಿ ಜನತೆಯ ಜೊತೆ ಸಂಪರ್ಕವನ್ನು ಇಟ್ಟುಕೊಂಡು ಅವರ ಸಂಕಷ್ಟಗಳನ್ನು ಬಗೆಹರಿಸಬೇಕು ಎನ್ನುವುದಕ್ಕೆ ಬಹುಶಃ ಟಿ.ಆರ್. ಶಾಮಣ್ಣ ಅವರಿಗೆ ಬದಲಾಗಿ ಇನ್ನೊಬ್ಬ ವ್ಯಕ್ತಿ ನಮ್ಮ ನಾಡಿನಲ್ಲಿ ಇಲ್ಲವೇನೋ ಎನ್ನುವ ರೀತಿಯಲ್ಲಿ ಅವರು ಸೇವೆಯನ್ನು ವಿಶೇಷವಾಗಿ ಬೆಂಗಳೂರಿನ ಮಹಾನಗರದ ಜನತೆಗೆ ಮಾಡಿದ್ದಾರೆ. ಇದೇರೀತಿ ಶ್ರೀ ದೇಶ್‌ಮುಖ್ ಅವರು ಸೌಜನ್ಯಮೂರ್ತಿಯಾಗಿದ್ದರು. ಅವರು ಮಂತ್ರಿಯಾಗಿ ನಡೆದುಕೊಂಡಂಥ ರೀತಿ, ಎಲ್ಲರ ಜೊತೆ ಇಟ್ಟುಕೊಂಡಿದ್ದ ಸಂಪರ್ಕ, ಸಂಬಂಧ, ಮತ್ತು ಸಾಮಿರಾರು ಎಕರೆ ಜಮೀನನ್ನು ಯಾವುದೇ ಕಾನೂನು ಬಂದು ಬಡವರಿಗೆ ಹಂಚಿಕೆ ಆಗಬೇಕೆಂದಾಗ ಅದನ್ನು ತಡೆಯದೆ ಬಡವರೇ ಸಾಗುವಳಿ ಮಾಡಿಕೊಳ್ಳಲಿ ಎಂದು ತಾವಾಗಿಯೆ ಮುಂದೆ ಬಂದು ಹಂಚಿದಂಥಾದ್ದು ಮತ್ತು ರೈತರ ಬಗ್ಗೆ ಕಳಕಳಿ ಇದ್ದಂಥಾದ್ದು ಅವರ ವಿಶೇಷ ಗುಣಗಳು, ಹಾಗೆಯೇ ಒಬ್ಬ ಹಿಂದುಳಿದ ಜನಾಂಗದ ನಾಯಕರಾಗಿ ಡಾ: ತಿಪ್ಪೇಸ್ವಾಮಿಯವರು ಇದ್ದರು. ನಿಜವಾಗಿಯೂ ಸಹ ಅವರು ನಮ್ಮೆಲ್ಲರಿಗೂ ಮಾಡಿರುವಂಥ ಮಾರ್ಗದರ್ಶನ ಮತ್ತು ಏನು ಹೆಜ್ಜೆಯನ್ನು ಅವರು ಇಟ್ಟರೋ ಆ ಹೆಜ್ಜೆಯಲ್ಲಿ ನಾವು ಮುಂದಕ್ಕೆ ಹೋದಾಗ, ಅವರ ಮನದಾಳದಲ್ಲಿದ್ದಂಥ ಭಾವನೆಗಳನ್ನು ನಾವು ಸಾಕಾರಗೊಳಿಸಿದಾಗ ಮಾತ್ರ ಬಹುಶಃ ಈ ರೀತಿ ಶ್ರದ್ಧಾಂಜಲಿ ಅರ್ಪಿಸಿದ್ದು ಸಾರ್ಥಕವಾಗುತ್ತದೆಯೆಂದು ಭಾವಿಸಿದ್ದೇನೆ. ಇಂತಹ ಒಂದು ಸಂದರ್ಭದಲ್ಲಿ ಈ ದುಃಖವನ್ನು ತಡೆದುಕೊಳ್ಳುವಂಥ ಶಕ್ತಿಯನ್ನು ಭಗವಂತನು ಅವರ ಕುಟುಂಬಕ್ಕೆ ಕೊಡಲಿ, ಅದೇ ರೀತಿ ಭಗವಂತನು ಅವರ ಆತ್ಮಕ್ಕೆ ಶಾಂತಿ ಕೊಡಲಿ ಎಂದು ಪ್ರಾರ್ಥನೆ ಮಾಡಿ ನನ್ನ ಪಕ್ಷದ ಮತ್ತು ನನ್ನ ಪರವಾಗಿ ಈ ಸಂದರ್ಭದಲ್ಲಿ ಅವರುಗಳಿಗೆ ಶ್ರದ್ಧಾಂಜಲಿಯನ್ನು ಅರ್ಪಿಸುತ್ತೇನೆ.

† ಶ್ರೀ ಸಿ. ಬೈರೇಗೌಡ (ವೇಮಗಲ್):– ಸನ್ಮಾನ್ಯ ಅಧ್ಯಕ್ಷರೇ, ಈ ದಿವಸ ಒಂದು ತಲೆಮಾರಿನ ದಿಗ್ಗಜಗಳಾಗಿದ್ದಂತಹವರನ್ನು ಕಳೆದುಕೊಂಡು, ಅವರ ಜಾಗವನ್ನು ತುಂಬುವುದಕ್ಕೆ ಸಾಧ್ಯವೇ ಇಲ್ಲ ಎನ್ನತಕ್ಕಂಥ ಮಹಾವ್ಯಕ್ತಿಗಳು ನಮ್ಮಿಂದ ದೂರವಾಗಿದ್ದಾರೆ. ಈ ಪಟ್ಟಿಯಲ್ಲಿರ ತಕ್ಕಂಥವರಲ್ಲಿ ಇಬ್ಬರನ್ನು ಬಿಟ್ಟರೆ, ಉಳಿದಂತೆ ಎಲ್ಲರ ಸಂಪರ್ಕ ಮತ್ತು ಅವರ ಜೊತೆಯಲ್ಲಿ ಕೆಲಸ ಮಾಡತಕ್ಕ ಅವಕಾಶ ನನಗೆ ಒದಗಿ ಬಂದಿದೆ. ಆ ಇಬ್ಬರು ಯಾರು ಎಂದರೆ, ಶ್ರೀಯುತ ಕಮಲಾಪತಿ ತ್ರಿಪಾಠಿ ಮತ್ತು ಶ್ರೀಯುತ ಸಿ.ಎಂ. ಪೂಣಚ್ಚನವರು. ಅದರಲ್ಲಿಯೂ ಪ್ರಮುಖವಾಗಿ ನಮ್ಮ ಪಕ್ಷದ ಅಧ್ಯಕ್ಷರಾಗಿದ್ದಂಥ ಡಾ॥ ಬಿ.ಎಂ. ತಿಪ್ಪೇಸ್ವಾಮಿಯವರ ಸಾವಂತು ನಮ್ಮ ಪಕ್ಷಕ್ಕೆ ಮತ್ತು ಇಡೀ ಸಮಾಜಕ್ಕೆ ಭರಿಸಲಾಗದಂಥ ದುಃಖವನ್ನು ತರತಕ್ಕಂಥಾದ್ದು. ನನಗೆ ಇವರ ವಿಚಾರದಲ್ಲಿ

ಮಾತನಾಡುವಾಗ ಒಂದೊಂದು ಸಾರಿ ದುಃಖವಾಗುತ್ತದೆ ಮತ್ತೆ ಸಿಟ್ಟು ಕೂಡ ಬರುತ್ತದೆ. ಕಾರಣವೇನೆಂದರೆ, ನಮ್ಮ ದೇಶದಲ್ಲಿ ಪ್ರತಿಯೊಬ್ಬರನ್ನೂ ಕೂಡ ಸಾಮಾನ್ಯವಾಗಿ ಗುರುತಿಸತಕ್ಕಂಥಾದ್ದು ಅವರ ಹುಟ್ಟಿನಿಂದ, ಹುಟ್ಟಿನಿಂದ ಗುರುತಿಸುತ್ತಾರೆ. ಡಾ॥ ತಿಪ್ಪೇಸ್ವಾಮಿಯವರು ಹರಿಜನರಾಗಿದ್ದರು. ಆದರೆ ಸಮಾಜ ಕೂಡ ಅವರನ್ನು ಹರಿಜನರೇಂದೇ ಗುರುತಿಸುತ್ತಿತ್ತು. ಆದರೆ, ಇದಕ್ಕಿಂತ ಅತಿ ಎತ್ತರಕ್ಕೆ ಅತೀ ಮೇಲ್ಮಟ್ಟಕ್ಕೆ ಅವರ ವಿಚಾರಧಾರೆ ಹರಿದಿತ್ತು. ಅವರು ಸರ್ಕಾರಿ ಸೇವೆಯಲ್ಲಿದ್ದಾಗ, ಪಬ್ಲಿಕ್ ಸರ್ವೀಸ್ ಕಮೀಷನ್ ಸದಸ್ಯರಾಗಿದ್ದಾಗ ಮತ್ತು ಈ ಸಭೆಯ ಸದಸ್ಯರಾಗಿದ್ದಾಗ ಹಾಗೂ ನಮ್ಮ ಪಕ್ಷದ ಅಧ್ಯಕ್ಷರಾಗಿದ್ದಾಗ ಆ ರೀತಿ ಮೇಲ್ಮಟ್ಟದಲ್ಲಿ ನಡೆದುಕೊಂಡಿದ್ದಾರೆ. ಅವರ ಜೊತೆಯಲ್ಲಿ ಹಗಲು ರಾತ್ರಿ ಇದ್ದು ಕೆಲಸ ಮಾಡತಕ್ಕ ಅವಕಾಶ ನನಗೆ ಒದಗಿ ಬಂದಿತ್ತು. ಬಹಳ ನಿಕಟವಾದ ಮತ್ತು ಬಹಳ ಹತ್ತಿರದಿಂದ ನೋಡತಕ್ಕ ಸಂದರ್ಭ ಒದಗಿ ಬಂದಿತ್ತು. ಅವರು ಬಹಳ ನಿಷ್ಠೂರವಾದಿಗಳಾಗಿದ್ದರು. ಅನೇಕಬಾರಿ ನನಗೆ ಹೇಳುತ್ತಿದ್ದರು. ಗೌಡರೇ, ಪಬ್ಲಿಕ್ ಸರ್ವೀಸ್ ಕಮೀಷನ್‌ನಲ್ಲಿ ನಾನು ಸದಸ್ಯನಾಗಿದ್ದಾಗ ಪ್ರತಿ ದಿವಸ ಲಕ್ಷ ಲಕ್ಷ ರೂಪಾಯಿಗಳು ಬಂದರೂ ನನಗೆ ಬೇಡವೆಂದು ಹೇಳಿ ಕೆಲಸ ಮಾಡಬೇಕಾದಂತಹ ದುರ್ದೆಸೆ ಈ ಸಮಾಜದಲ್ಲಿ ಈ ದೇಶಕ್ಕೆ ಒದಗಿ ಬಂದಿದೆ ಎಂದು ಹೇಳುತ್ತಿದ್ದರು. ಮತ್ತು ನಮ್ಮ ಪಕ್ಷದಲ್ಲಿ ತಾತ್ವಿಕವಾದ ಭಿನ್ನಾಭಿಪ್ರಾಯಗಳ ಬಗ್ಗೆ ಸರ್ಕಾರ ಹೋಗತಕ್ಕ ದಾರಿ ಬಗ್ಗೆ, ಸರ್ಕಾರದ ನೀತಿಗಳ ಬಗ್ಗೆ ಬಹಳ ತೀವ್ರವಾದ ಪ್ರತಿಭಟನೆಯನ್ನು ವ್ಯಕ್ತಮಾಡಿರತಕ್ಕಂಥವರು. ಅವರು ಯಾವತ್ತೂ, ಯಾವುದೇ ವಿಚಾರಕ್ಕೂ ಅಂಜತಕ್ಕವರಲ್ಲ. ಅವರು ಏನಾದರೂ ಆಕ್ಕಪಕ್ಕ, ಆ ಕಡೆ, ಈ ಕಡೆ ಕಣ್ಣುಹಾಯಿಸುವ ಸಣ್ಣ ಕೆಲಸ ಮಾಡಿದ್ದರೆ, ಲಕ್ಷ ಕೋಟಿ ರೂಪಾಯಿಗಳ ರಾಶಿ ಬಂದು ಬೀಳುವ ಪ್ರಸಂಗ ಇತ್ತು. ಆದರೆ, ಅವರು ಆ ಕೆಲಸ ಮಾಡಲಿಲ್ಲ. ಅವರ ಆರ್ಥಿಕ ಪರಿಸ್ಥಿತಿ ಯಾವರೀತಿ ಇತ್ತು ಎನ್ನುವುದು ಇವತ್ತು ಕೂಡ ಎಲ್ಲರಿಗೂ ಗೊತ್ತಿದೆ. ಅವರು ದಿವಂಗತರಾದ ದಿವಸ ಅವರ ಶವಸಂಸ್ಕಾರಕ್ಕೆ ಬೇಕಾಗಿರತಕ್ಕ ಖರ್ಚನ್ನು ಕೂಡ ಭರಿಸತಕ್ಕ ಶಕ್ತಿ ಅವರ ಮನೆಯವರಿಗೆ ಇರಲಿಲ್ಲ. ಯಾವುದೋ ಒಂದು ಸಣ್ಣ ಮನೆ ಬಿಟ್ಟರೆ, ಅವರಿಗೆ ಬೇರೆ ಆಸ್ತಿ ಇಲ್ಲ. 6 ಲಕ್ಷ ರೂಪಾಯಿಗಳ ಸಾಲದ ಹೊರೆಯನ್ನು ಮಾತ್ರ, ಅವರ ಕುಟುಂಬದವರು ಹೊರತಕ್ಕ ಪರಿಸ್ಥಿತಿ ಇವತ್ತು ಒದಗಿ ಬಂದಿದೆ. ಇವರನ್ನು ನಾನಾಗಲೇ ಹೇಳಿದಹಾಗೆ, ಸಮಾಜ ಹುಟ್ಟಿನಿಂದ ಗುರುತಿಸುತ್ತದೆ. ಅವರನ್ನು ಒಂದು ಜನಾಂಗದ ಮುಖಂಡರು ಎಂದು ಕರೆಯುತ್ತಾರೆಯೇ ವಿನಹ, ಸಮಾಜದ ಮುಖಂಡರು ಎಂದು ಕರೆಯತಕ್ಕ ಪರಿಪಾಠ ಈ ದೇಶದಲ್ಲಿ ಇಲ್ಲ. ಸಮಾಜದಲ್ಲಿ ಅತಿ ಎತ್ತರಕ್ಕೆ ಬೆಳೆದವರು, ಸಮಾಜದ ಮುಖಂಡರು ಇವತ್ತು ನಮ್ಮ ಕಣ್ಣುಮುಂದೆ ಇಲ್ಲ. ಅವರು ಬಿಟ್ಟು ಹೋಗಿರತಕ್ಕ ಹಾದಿ, ನಡೆದುಬಂದಿರತಕ್ಕ ಮಾರ್ಗ ನಮ್ಮೆಲ್ಲರಿಗೂ ಆದರಲ್ಲೂ ನಮ್ಮ ಪಕ್ಷಕ್ಕೆ ಮಾರ್ಗದರ್ಶನ ನೀಡಲಿ ಎಂದು ಆಶಿಸುತ್ತೇನೆ. ಅವರ ಸಾವನ್ನು ಭರಿಸತಕ್ಕಂಥ ಶಕ್ತಿ ಅವರ ಕುಟುಂಬಕ್ಕೆ ಬರಲಿ ಎಂದು ನಾನು ಹಾರೈಸುತ್ತೇನೆ.

ಅದೇ ರೀತಿಯಲ್ಲಿ ನಮ್ಮ ಜಿಲ್ಲೆಯ ಮತ್ತೊಬ್ಬ ದಿಗ್ಗಜ ಎಂದರೆ ಶ್ರೀಮಾನ್ ಪಾಪಣ್ಣನವರು. ಅವರು ರಾಜಕೀಯ ಪ್ರವೇಶ ಮಾಡಿದ್ದು ಸ್ವಾತಂತ್ರ್ಯ ಹೋರಾಟದ ಮೂಲಕ. ನಮ್ಮ ದೇಶಕ್ಕೆ ಸ್ವಾತಂತ್ರ್ಯವನ್ನು ತಂದುಕೊಡತಕ್ಕಂಥಾದ್ದರಲ್ಲಿ ಪ್ರಮುಖವಾದ ಹೋರಾಟವನ್ನು ನಮ್ಮ ಕೋಲಾರ ಜಿಲ್ಲೆಯಲ್ಲಿ ನಡೆಸಿರತಕ್ಕಂಥವರು ಅವರು. ಸ್ವಾತಂತ್ರ್ಯ ಬಂದಮೇಲೆ ಕಾಂಗ್ರೆಸ್ ಪಕ್ಷ ಹಿಡಿದಂಥ ದಾರಿಗೆ ಬೇಸತ್ತು, ಕಾಂಗ್ರೆಸ್ ಪಕ್ಷವನ್ನು ಬಿಟ್ಟು, ಜನಸಾಮಾನ್ಯರ ಸಂಘಟನೆ ಮಾಡತಕ್ಕಂಥ ಬೃಹದಾಕಾರವಾದ ಕೆಲಸವನ್ನು ಅವರು ನಮ್ಮ ಜಿಲ್ಲೆಯಲ್ಲಿ ಮಾಡಿದ್ದಾರೆ. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಸದಸ್ಯರಾಗಿ, ಆ ಪಕ್ಷವನ್ನು ಸಂಘಟನೆ ಮಾಡುವುದರಲ್ಲಿ, ಅದರಲ್ಲೂ ಕೂಡಾ ಭೂರಹಿತರನ್ನು ಸಂಘಟನೆ ಮಾಡುವುದರಲ್ಲಿ ಪ್ರಮುಖವಾದ ಪಾತ್ರವನ್ನು ವಹಿಸಿರುವವರು. ಇವತ್ತೇನಾದರೂ ಕೂಡಾ ಕೋಲಾರ ಜಿಲ್ಲೆಯಲ್ಲಿ ಸಾವಿರಾರು ಜನ ಆಷ್ಟೋ ಇಷ್ಟೋ ಭೂಮಿಯನ್ನು ಹೊಂದಿದ್ದಾರೆ ಎಂದರೆ ಅದಕ್ಕೆ ಮುಖಂಡತ್ವವನ್ನು ಕೊಟ್ಟಿರತಕ್ಕಂಥವರು ಶ್ರೀ ಪಾಪಣ್ಣನವರು. ಇವತ್ತು ಸುಮಾರು ಮೂರು ಸಾವಿರ ಎಕರೆ ಭೂಮಿಯನ್ನು ಭೂರಹಿತರಾಗಿದ್ದ ರೈತರು ನಮ್ಮ ಜಿಲ್ಲೆಯಲ್ಲಿ ಉಳುತ್ತಿದ್ದಾರೆ. ಆದಕ್ಕೆ ಶ್ರೀಮಾನ್ ಪಾಪಣ್ಣನವರ ಮುಖಂಡತ್ವ ಇತ್ತು. ಅವರ ಮುಖಂಡತ್ವದಲ್ಲಿ

ನಾವು ಭೂಗ್ರಹಣ ಚಳುವಳಿಯನ್ನು ಜಿಲ್ಲೆಯಾದ್ಯಂತ ಮಾಡಿ ಬಡವರಿಗೆ ಭೂಮಿಯನ್ನು ದೊರಕಿಸತಕ್ಕಂಥ ಕೆಲಸ ಮಾಡಿದ್ದೇವೆ. ಆ ಕೆಲಸವನ್ನು ಅವರು ಮಾಡಿಬಿಟ್ಟು ಹೋಗಿದ್ದಾರೆ.

ಅಲ್ಲದೇ ಪಟ್ಟಣ ಪ್ರದೇಶದಲ್ಲಿ, ಕೆಲವೇ ಪಟ್ಟಣಗಳು ಇದ್ದಂಥ ನಮ್ಮ ಕಡೆ, ಆ ಪಟ್ಟಣಗಳಲ್ಲಿ ಬಡ ಜನರು ಹಂದಿಗೂಡು ಯಾವರೀತಿ ಇರುತ್ತದೋ ಅಂತಹ ಕಡೆಗಳಲ್ಲಿ ವಾಸಮಾಡುತ್ತಿದ್ದರು. ಅಂತಹ ಕಡೆ ಸರಕಾರ ನಿವೇಶನಗಳನ್ನು ಕೊಡುವುದಕ್ಕಿಂತ ಮುಂಚೆ, ನಿವೇಶನ ಕೊಡಬೇಕೆಂದು ಸರಕಾರ ಮನಸ್ಸು ಮಾಡುವುದಕ್ಕಿಂತ ಮೊದಲು, ಶ್ರೀಮಾನ್ ಪಾಪಣ್ಣನವರ ನೇತೃತ್ವದಲ್ಲಿ ನಾವು ನಿವೇಶನರಹಿತರ ಸಂಘಟನೆಯನ್ನು ಬೆಳೆಸಿ, ಸಾವಿರಾರು ಕುಟುಂಬಗಳಿಗೆ ನಿವೇಶನ ದೊರಕಿಸಿಕೊಡತಕ್ಕಂಥ ಮತ್ತು ಮನೆಗಳನ್ನು ಕಟ್ಟಿಸಿಕೊಡತಕ್ಕಂಥ ಕೆಲಸವನ್ನು ಅವರ ಮುಖಂಡತ್ವದಲ್ಲಿ ಮಾಡಿದ್ದೆವು. ಇದು ಅವರ ಮುಖಂಡತ್ವದಲ್ಲಿ ನಡೆಯಿತು. ನಮ್ಮ ಜಿಲ್ಲೆಯಲ್ಲಿ ಎಡಪಂಥವನ್ನು ಬೆಳೆಸುವುದಕ್ಕೆ ಅವರ ಕೊನೆಯುಸಿರು ಇರುವವರೆಗೂ ಕೂಡಾ ಕೆಲಸ ಮಾಡಿದರು. ಎಡಪಂಥವನ್ನು ಬೆಳೆಸುವುದಕ್ಕೆ ಸಾಕಷ್ಟು ಪ್ರಯತ್ನ ಮಾಡಿರತಕ್ಕಂಥವರು ಅವರು. ತತ್ವನಿಷ್ಠರಾಗಿ, ತಮ್ಮ ಕೊನೆಗಾಲದವರೆಗೂ ಪ್ರಶ್ನಾತೀತವಾಗಿದ್ದು, ಅವರು ನಂಬಿದಂಥ ತತ್ವಕ್ಕೋಸ್ಕರ ಕೊನೆಯುಸಿರುವವರೆಗೂ ಹೋರಾಟ ಮಾಡಿದರು.

ಮತ್ತೊಬ್ಬ ಪ್ರಮುಖರು ಶ್ರೀಮಾನ್ ಬಿ.ಎಲ್. ನಾರಾಯಣಸ್ವಾಮಿಯವರು. ಅವರು ನಮ್ಮೆಲ್ಲರಿಗೂ ಕೂಡಾ ಹಿರಿಯರು. ಅವರೂ ಕೂಡಾ ಸ್ವಾತಂತ್ರ್ಯ ಹೋರಾಟದಲ್ಲಿ ಪ್ರಮುಖ ಪಾತ್ರ ವಹಿಸಿರತಕ್ಕಂಥವರು. ಅವರೂ ಸಹ ನಮ್ಮ ಮುಂದೆ ಇಲ್ಲವಾಗಿದ್ದಾರೆ.

ನಮ್ಮ ಪಕ್ಷದ ಮುಖಂಡರಾಗಿದ್ದಂಥ ಶ್ರೀಮಾನ್ ಶಾಮಣ್ಣನವರು, ಅವರೂ ಕೂಡಾ ಇವತ್ತು ಇಲ್ಲವಾಗಿದ್ದಾರೆ. ಶಾಮಣ್ಣನವರಿಗೂ ನನಗೂ ಒಂದು ಸಂದರ್ಭದಲ್ಲಿ ಘರ್ಷಣೆ ಆಗುತ್ತಿತ್ತು. ಯಾವಾಗ ಎಂದರೆ ಹಾಲಿನ ಬೆಲೆ ಏರಿಸಿದಾಗ. ಅದಕ್ಕೆ ಮೊದಲನೇ ಪ್ರತಿಕ್ರಿಯೆ ಬರುತ್ತಿದ್ದುದು ಶ್ರೀಮಾನ್ ಶಾಮಣ್ಣನವರಿಂದ. ಹಾಲಿನ ಬೆಲೆ ಏರಿಸಬೇಕೆಂದು ನಾನು ಹೇಳುತ್ತಿದ್ದೆ, ಅವರು ಹಾಲಿನ ಬೆಲೆಯನ್ನು ತಗ್ಗಿಸಬೇಕೆಂದು ಹೇಳುತ್ತಿದ್ದರು. ನಾನು ಆಗ ತಮಾಷೆಯಾಗಿ ಹೇಳುತ್ತಿದ್ದೆ, ಶಾಮಣ್ಣನವರಿಗೆ ಒಂದು ಹಸು ಕೊಟ್ಟು ಬಿಡೋಣ, ಆ ಹಸುವನ್ನು ಅವರು ಸಾಕಿ ಹಾಲು ಕರೆದು ಕುಡಿಯುವುದಾದರೆ ಸಂತೋಷ. ಹಸುವನ್ನು ಸಾಕಿ ಹಾಲನ್ನು ಉತ್ಪಾದನೆ ಮಾಡಬೇಕಾದರೆ ಎಷ್ಟು ಕಷ್ಟ ಇದೆ ಎಂದು ಆಗ ಅವರಿಗೆ ಗೊತ್ತಾಗುತ್ತದೆ ಎಂದು ನಾನು ತಮಾಷೆಗಾಗಿ ಹೇಳುತ್ತಿದ್ದೆ. ಆದರೆ ಶ್ರೀಮಾನ್ ಶಾಮಣ್ಣನವರು ಸ್ವಾರ್ಥಕ್ಕಾಗಿ ಈ ರೀತಿ ಹೇಳುತ್ತಿರಲಿಲ್ಲ. ನಗರ ಪ್ರದೇಶದ ಸಮಸ್ಯೆಗಳನ್ನು ಬಹಳ ಯಶಸ್ವಿಯಾಗಿ ಅವರು ಪ್ರತಿನಿಧಿಸುತ್ತಿದ್ದರು. ಅವರೂ ಸಹ ನಮ್ಮ ಕಣ್ಣಮುಂದೆ ಇಲ್ಲವಾಗಿದ್ದಾರೆ.

ಅದೇ ರೀತಿಯಲ್ಲಿ ಬಿ.ಎಂ. ಪಾಟೀಲರು ಇವರು ನಿಜವಾದಂಥ ವ್ಯಕ್ತಿ. ಒಬ್ಬ ರೈತರಾಗಿ, ರೈತರ ಕಷ್ಟವನ್ನು ಅರಿತಿರತಕ್ಕಂಥವರಾಗಿ ಇದ್ದವರು. ಅವರು ಏನಾದರೂ ಕೂಡಾ ನಂಬಿದರೆ, ಹಿಡಿದರೆ, ಅಷ್ಟೇ ಛಲದಿಂದ ಆದನ್ನು ಸಾಧಿಸತಕ್ಕಂಥ ಒಂದು ಶಕ್ತಿ ಉಳ್ಳಂಥವರು.

ಅವರು ಬಿಜಾಪುರ ಜಿಲ್ಲೆಯಲ್ಲಿ, ಒಬ್ಬ ಪ್ರಶ್ನಾತೀತ ನಾಯಕರಾಗಿ ಕೆಲಸ ಮಾಡಿದ್ದಾರೆ. ಅವರ ಜೊತೆಯಲ್ಲಿ ನಾನು ವಿಧಾನ ಸಭೆಯನ್ನು ಪ್ರವೇಶ ಮಾಡಿದಾಗ ಅವರ ಪಕ್ಕದಲ್ಲಿ ಕುಳಿತುಕೊಳ್ಳತಕ್ಕಂಥ ಒಂದು ಭಾಗ್ಯ ನನಗೆ ಒದಗಿ ಬಂದಿತ್ತು. ಅಂತಹವರು ಇವತ್ತಿನ ದಿವಸ ಇಲ್ಲ. ಅದೇ ರೀತಿ ಶ್ರೀಮಾನ್ ಎಸ್.ಎಸ್.ಕಡಪಟ್ಟಿಯವರು ಬಿಜಾಪುರ ಜಿಲ್ಲೆಯವರು. ಅವರು ಆಪ್ಪರ್ ಕೃಷ್ಣಾ ಯೋಜನೆ ಬಗ್ಗೆ ಸಾಕಷ್ಟು ಶ್ರಮ ವಹಿಸಿ, ಆ ಯೋಜನೆ ತ್ವರಿತಗತಿಯಲ್ಲಿ ಆಗಬೇಕೆಂದು ಪ್ರತಿಪಾದಿಸುತ್ತಿದ್ದವರು. ಇಂತಹ ಎಲ್ಲಾ ಮುಖಂಡರುಗಳನ್ನು ಇವತ್ತಿನ ದಿವಸ ನಾವು ಕಳೆದುಕೊಂಡಿದ್ದೇವೆ. ಅವರು ಇವತ್ತಿನ ದಿವಸ ನಮ್ಮ ಎದುರಿಗೆ ಇಲ್ಲದಂತೆ ಕಣ್ಮರೆಯಾಗಿದ್ದಾರೆ. ಅವರ ಆತ್ಮಕ್ಕೆ ಭಗವಂತ ಚಿರ ಶಾಂತಿ ನೀಡಲೆಂದು ನಾನು ಹಾರೈಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ):- ಮಾನ್ಯ ಅಧ್ಯಕ್ಷರೆ, ಸುಮಾರು 11 ಜನರು ರಾಷ್ಟ್ರದ ರಾಜ್ಯದ ಸೇವೆ ಮಾಡಿರತಕ್ಕಂಥ ಹಿರಿಯರ ನಿಧನದ ಬಗ್ಗೆ ತಾವು ಮಂಡಿಸಿರತಕ್ಕಂಥ

ನಿರ್ಣಯದ ಜೊತೆಗೆ ಅವರ ಸ್ಮರಣೆ ಮಾಡುವ ಮೂಲಕ ಕೆಲವು ಮಾತುಗಳನ್ನು ಹೇಳುತ್ತೇನೆ. ಇವತ್ತು ರಾಜ್ಯದ , ರಾಷ್ಟ್ರದ ಏಳಿಗೆಗೆ ಅಪಾರ ಸೇವೆ ಸಲ್ಲಿಸಿದ ಅನೇಕ ಜನರ ಗುಣಗಾನವನ್ನು ಮಾಡುತ್ತಿದ್ದೇವೆ. ಇದರ ಜೊತೆಗೆ ನಾನು ಒಂದೇ ಒಂದು ಸಲಹೆಯನ್ನು ತಮಗೆ ಈ ಸಂದರ್ಭದಲ್ಲಿ ಈ ಸಭೆಯ ಮುಖಾಂತರ ತಿಳಿಸಲು ಇಚ್ಛಿಪಡುತ್ತೇನೆ. ಅನೇಕ ಜನರ ನಿಧನದ ನಂತರ ಅವರ ಸಂತಾಪ ಸೂಚಕ ನಿರ್ಣಯವನ್ನು ಮಾಡಿ ಅಲ್ಲಿಗೆ ಕೈ ಬಿಟ್ಟುಬಿಡುತ್ತೇವೆ. ಅದಾದ ನಂತರ ಅವರ ಕುಟುಂಬದ ಜೀವನದ ಪ್ರಶ್ನೆ ಏನು? ಅವರ ಮನೆಗಳ ಪ್ರಶ್ನೆ ಏನು? ಎನ್ನತಕ್ಕಂಥದ್ದರ ಬಗ್ಗೆ ನಾವು ಯಾರೂ ಇದುವರೆಗೂ ಪರಿಶೀಲನೆ ಮಾಡಿಲ್ಲ. ಈ ನಿರ್ಣಯವಾದ ಮೇಲೆ ಮುಂದೆ ಏನು? ನಾನು ಅನೇಕ ಬಾರಿ ನೋಡಿದ್ದೇನೆ. ಮಾಜಿ ಶಾಸಕರು ಯಾರಾದರೂ ತೀರಿಕೊಂಡರೆ ಅವರ ಮಕ್ಕಳು ವಿಧಾನ ಸೌಧಕ್ಕೆ ಅಲೆದು ಮಂತ್ರಿಗಳ ಹತ್ತಿರ ಹೋದರೆ ಅವರನ್ನು ಕೇಳುವವರೇ ಗತಿ ಇಲ್ಲ. ಅಂತಹ ಜನರು ನಿಧನರಾದಾಗ ನಾವು ಇಲ್ಲಿ ಸಂತಾಪ ಸೂಚಕ ನಿರ್ಣಯವನ್ನು ಮಾಡಿದಾಗ ನಾವು ಇಲ್ಲಿ ಎಷ್ಟು ಪ್ರಾಮಾಣಿಕವಾಗಿ ಸಂತಾಪ ಸೂಚಕ ನಿರ್ಣಯವನ್ನು ಮಾಡುತ್ತೇವೆಯೋ ಅಷ್ಟೇ ಪ್ರಾಮಾಣಿಕವಾಗಿ ಅವರ ಮನೆತನದ ಪ್ರಶ್ನೆ ಏನು? ಅವರ ಜೀವನದ ಪ್ರಶ್ನೆ ಏನು ಅವರನ್ನೇ ನಂಬಿರತಕ್ಕಂಥ ಜನರ ಪ್ರಶ್ನೆ ಏನು ಎನ್ನುವುದನ್ನು ಸಹ ಗಮನಿಸಬೇಕಾಗುತ್ತದೆಂದು ನಾನು ಈ ಸಂದರ್ಭದಲ್ಲಿ ಹೇಳಿ ಮೃತರಾದ 11 ಜನರ ಆತ್ಮಕ್ಕೆ ಶಾಂತಿ ದೊರಕಲೆಂದು ಹಾರೈಸಿ, ನಾನು ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಬಾಬಾಗೌಡ ರುದ್ರಗೌಡ ಪಾಟೀಲ್ (ಕಿತ್ತೂರು):- ಮಾನ್ಯ ಅಧ್ಯಕ್ಷರೇ, ಹಿರಿಯ ವ್ಯಕ್ತಿಗಳು ನಮ್ಮ ಸಮಕಾಲೀನ ಸಮಾಜದ ಸಂಪತ್ತು. ವ್ಯಕ್ತಿಯ ಹಿರಿಮೆ ಕಿರಿಮೆ ಅವರ ಕೃತ್ಯ ಮತ್ತು ಅವರ ಆಲೋಚನೆಗಳಿಂದ ವ್ಯಕ್ತವಾಗುತ್ತದೆ. ಅವರ ಒಂದು ಶ್ರೇಷ್ಠ ಕೃತ್ಯಗಳಿಂದ ಮತ್ತು ಆಲೋಚನೆಗಳಿಂದ ಮಾತ್ರ ಗೋಚರವಾಗುತ್ತದೆ. ಆಂತೆಯೇ ಶ್ರೀಮಾನ್ ಕಮಲಾಪತಿ ತ್ರಿಪಾಠಿಯವರು ಸಮಕಾಲೀನ ಸಮಾಜ ಜೀವನದ ಒಂದು ಶ್ರೀಮಂತಿಕೆಯನ್ನು ತಂದುಕೊಟ್ಟಿದ್ದರು. ಅವರ ಅಗಲಿಕೆಯಿಂದ ನಮ್ಮ ಸಮಾಜ ಇಂದು ಬಡವಾಗಿದೆ. ಅವರಂತೆ ಇನ್ನುಳಿದ ಹತ್ತು ಜನ ಧುರೀಣರು ನಮ್ಮನ್ನು ಅಗಲಿ ಹೋಗಿದ್ದಾರೆ. ಅವರ ನೆನಪು ನಾವು ಮಾಡಿಕೊಂಡು ಅವರ ಕುಟುಂಬದವರು ಆ ಶಕ್ತಿಯನ್ನು ಭರಿಸಲು ಭಗವಂತ ಶಕ್ತಿ ಕೊಡಲೆಂದು ನಾನು ಆಸೆ ಮಾಡಿ ನನ್ನ ಪರವಾಗಿ ಮತ್ತು ನಮ್ಮ ಪಕ್ಷದ ಪರವಾಗಿ ಅವರ ಮನಸ್ಸಿಗೆ ಶಾಂತಿ ಸಿಗಲೆಂದು ನಾನು ಆಸೆ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

SRI QUAMARUL ISLAM: (Gulbarga):- Mr. Speaker, Sir, today 11 great personalities are not with us and particularly Sri Kamalapathi Tripathiji, I must say at this juncture that when there was a great threat and challenge to the very secularism and integrity of this country on 9th November 1989, the great dynamic leader Tripathiji said that he will not allow "Karseva" on the disputed land. Today, the country is facing the same situation. Today, he is not here with us. We offer our heartfelt condolences for the demise of these great personalities. I on my behalf and on behalf of my party, pray to the Almighty that may their souls rest in peace.

ಅಧ್ಯಕ್ಷರು:- ಈಗ ಮೃತರ ಗೌರವಾರ್ಥ ಮಾನ್ಯ ಸದಸ್ಯರೆಲ್ಲರೂ ಎದ್ದು ನಿಂತು ಒಂದು ನಿಮಿಷ ಮೌನ ಆಚರಿಸಬೇಕೆಂದು ಕೇಳಿಕೊಳ್ಳುತ್ತೇನೆ.

(ಮೃತರ ಗೌರವಾರ್ಥ ಸಭೆ ಎದ್ದು ನಿಂತು ಒಂದು ನಿಮಿಷ ಮೌನವನ್ನು ಆಚರಿಸಿತು.)

ಹುಟ್ಟು ಹಬ್ಬದ ಶುಭಾಶಯಗಳು

ಅಧ್ಯಕ್ಷರು:- ಶ್ರೀ ಗುಜ್ಜಲ ಹನುಮಂತಪ್ಪನವರು ಸದನದಲ್ಲಿ ಇದ್ದಾರೆಯೇ?